
## ಅದ್ವೈತ ಪ್ರಚ್ಛನ್ನ ಬೌದ್ಧವೆ?

ಇಲ್ಲಿ ಖ್ಯಾತ ಮಾಧ್ವ ವಿದ್ವಾಂಸರಾದ ಡಾ॥ ಏ.ವಿ.ನಾಗಸಂಪಿಗೆ ಆಚಾರ್ಯರ 'ಮತ ತ್ರಯ ಸಮೀಕ್ಷಾ' ಗ್ರಂಥದ ಕೆಲವು ಪುಟಗಳನ್ನು ನೋಡಬಹುದು:



**ಬೌದ್ಧರು ಪ್ರಚ್ಛನ್ನವೈದಿಕರು**

ಬೌದ್ಧರ ವಿಚಾರಧಾರೆಯಿಂದ ಅದ್ವೈತವಾದವು ಪ್ರಭಾವಿತವಾಗಿದೆ ಎಂಬ ಅಂಶವನ್ನು ಶಂಕರಾಚಾರ್ಯರು, ವಾಚಸ್ಪತಿಮಿಶ್ರರು, ಸರ್ವಜ್ಞಾತ್ಮಮುನಿ ಶ್ರೀಹರ್ಷ, ಆನಂದಬೋಧರೇ ಮೊದಲಾದ ಅದ್ವೈತದಾರ್ಶನಿಕರು ತೀವ್ರವಾಗಿ ಅಲ್ಲಗಳೆದಿದ್ದು, ಎರಡೂ ದರ್ಶನಗಳಲ್ಲಿರುವ ವೈಚಾರಿಕ ವಿಭಿನ್ನತೆಯನ್ನು ಸ್ಪಷ್ಟಪಡಿಸಿದ್ದಾರೆ-

Rarest Archiv



ಶ್ರೀ ಶಂಕರಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಹೀಗೆ ನುಡಿದಿದ್ದಾರೆ-

'ಆದ್ದರಿಂದ ಬ್ರಹ್ಮನಲ್ಲಿ ಎಲ್ಲ ವಿಕಾರಜಾತವನ್ನು (ವಿಶ್ವವನ್ನು) ಶ್ರುತಿಯು ನಿಷೇಧಿಸುತ್ತದೆ. ಬ್ರಹ್ಮವು ಅಂತಿಮ ಸತ್ಯವಾಗಿ ಉಳಿಯುತ್ತದೆ. ಈ ಕಾರಣದಿಂದ ನಿಷೇಧವು ಬ್ರಹ್ಮನೇ ಆಧಾರವಾಗಿಯುಳ್ಳದ್ದು. ಅಭಾವ (ಶೂನ್ಯ)ವನ್ನಲ್ಲ.'-

ಮುಂದಿನ ಪುಟ ನೋಡಿ:

**'ತಸ್ಮಾತ್ಪ್ರಪಂಚಮೇವ ಬ್ರಹ್ಮಣಿ ಕಲ್ಪಿತಂ ಪ್ರತಿಷೇಧತಿ, ಪರಿಶಿನಷ್ಟಿ, ಬ್ರಹ್ಮೇತ್ಯೇವಾವಗಂತವ್ಯಮ್ । ...... ತಸ್ಮಾದ್ಬ್ರಹ್ಮಾವಸಾನೋಽಯಂ ಪ್ರತಿಷೇಧಃ ನಾಭಾವಾವಸಾನ ಇತ್ಯಧ್ಯವಸ್ಯಾಮಃ'**

(ಸೂ. ಭಾ. 3/2/22 ಪುಟ. 366)

ವಾಚಸ್ಪತಿಗಳು ಎರಡೂ ವಾದಗಳ ವೈಲಕ್ಷಣ್ಯವನ್ನು ಈ ರೀತಿ ಉಪಪಾದಿಸಿದ್ದಾರೆ- 'ಬ್ರಹ್ಮವಾದಿಗಳು ನೀಲಾದ್ಯಾಕಾರವಾದ ಜ್ಞಾನವನ್ನು ಅಂಗೀಕರಿಸುವುದಿಲ್ಲ, ನೀಲಾದ್ಯಾಕಾರವನ್ನು ಅನಿರ್ವಚನೀಯವೆನ್ನುವರು.'-

**'ನ ಹಿ ಬ್ರಹ್ಮವಾದಿನೋ ನೀಲಾದ್ಯಾಕಾರಾಂ ವಿತ್ತಿಮಭ್ಯುಪಗಚ್ಛಂತಿ ಕಿಂತು ಅನಿರ್ವಚನೀಯಂ ನೀಲಾದೀತಿ'** (ಸೂ. ಭಾ. ಭಾ. 2/2/28 ಪುಟ 277)

ಸರ್ವಜ್ಞಾತ್ಮ ಮುನಿಗಳು ಈ ರೀತಿ ನುಡಿದಿದ್ದಾರೆ- 'ಬೌದ್ಧದರ್ಶನದಲ್ಲಿ ಅಂಗೀಕರಿಸಿದ ವಿಜ್ಞಾನ ತತ್ತ್ವವು, ನಿತ್ಯವಾಗಿರದೇ ಕ್ಷಣಿಕವಾಗಿದ್ದು ಅನೇಕವಾಗಿರುತ್ತದೆ. ಅದ್ವೈತ ದರ್ಶನದಲ್ಲಿ ವಿಜ್ಞಾನವು (ಬ್ರಹ್ಮವು) ಸತ್ಯವು ನಿತ್ಯವು ಏಕವೂ ಆಗಿರುತ್ತದೆ. ಆದ್ದರಿಂದ ವಿಜ್ಞಾನವಾದ ಅದ್ವೈತವಾದಗಳಿಗೆ ವೈಚಾರಿಕ ಸಮತೆ ಇರುವುದಿಲ್ಲ'-

**'ಪರಮಾರ್ಥ ಸಂಶ್ರಯತಯಾ ಜನಿತಂ**
**ಪ್ರವಿಭಕ್ತಮೇವ ತು ಪರಸ್ಪರತಃ ।**
**ಸ್ಥಿರತ್ವ ಮಭ್ಯುಪೇತಮಿಹ ನಃ ಸಮಯೇ**
**ನನು ಮಾತೃಮಾನವಿಷಯಪ್ರಭೃತಿ ॥'** (ಸಂ. ಶಾ. 2/28)

**'ವಿಜ್ಞಾನವಾದೀ ಕ್ಷಣಿಕತ್ವಮೇಷಾಂ**
**ಅಂಗೀಚಕಾರಾಽಪಿ ಬಹುತ್ವ ಮೇಷಃ ।**
**ವೇದಾಂತವಾದೀ ಸ್ಥಿರಸಂವಿದೇಕೇ-**
**ತ್ಯಂಗೀಚಕಾರೇತಿ ಮಹಾನ್ವಿಶೇಷಃ ॥'** (ಮಾ. ಶಂ. ದಿ.)

ಮುಂದಿನ ಪುಟ ನೋಡಿ:

ಖಂಡನಖಂಡಖಾದ್ಯ ರಚಿಸಿದ ಶ್ರೀಹರ್ಷನು ಈ ವಿಷಯದ ಬಗ್ಗೆ ತನ್ನ ಬೆಳಕು ಚೆಲ್ಲಿದ್ದಾನೆ-

''ಹೀಗಿರುವಲ್ಲಿ ಸೌಗತರಿಗೂ ಬ್ರಹ್ಮವಾದಿಗಳಿಗೂ ವಿಶೇಷವೇನೆಂದರೆ? ಸೌಗತರು ಎಲ್ಲವನ್ನೂ ಅನಿರ್ವಚನೀಯವೆನ್ನುವರು. ಲಂಕಾವತಾರದಲ್ಲಿ ಈ ರೀತಿ ಭಗವಾನರ ನುಡಿ ಇದೆ - ಬುದ್ಧಿಯಿಂದ ವಿಮರ್ಶಿಸಹೊರಟಾಗ ಪದಾರ್ಥಗಳ ಸ್ವಭಾವವನ್ನು ಗುರುತಿಸಲಾಗದು. ಆದ್ದರಿಂದ ಪದಾರ್ಥಗಳೆಲ್ಲವೂ ಅಭಿಲಾಪಶೂನ್ಯಗಳೂ ಸ್ವಭಾವ ರಹಿತವೂ ಆಗಿರುತ್ತವೆ. ''ಬ್ರಹ್ಮವಾದಿಗಳು ಬ್ರಹ್ಮನಿಗಿಂತ ಬೇರೆಯಾದ ಸಮಸ್ತ ಪ್ರಪಂಚವನ್ನು ಸತ್ ಅಥವಾ ಅಸತ್, ಸದಸತ್ ಮೊದಲಾದ ಯಾವುದೇ ಪ್ರಕಾರಗಳಿಂದ ನಿರ್ವಚನ ಮಾಡಲಸಾಧ್ಯವಾದುದರಿಂದ ಅನಿರ್ವಚನೀಯವೆನ್ನುವರು'' ಹೀಗೆ ಶ್ರೀಹರ್ಷನು ಈ ಎರಡೂ ವಾದಗಳಲ್ಲಿ ವೈಲಕ್ಷಣ್ಯವನ್ನು ಉಪಪಾದಿಸಿದ್ದಾನೆ.'-

**'ಏವಂ ಚ ಸತಿ ಸೌಗತಬ್ರಹ್ಮವಾದಿನೋಃ ಕೋ ವಿಶೇಷ ಇತಿ ಚೇತ್, ಅಯಂ ವಿಶೇಷಃ, ಯದಾದಿಮಃ ಸರ್ವಮೇವಾನಿರ್ವಚನೀಯಂ ವರ್ಣಯತಿ, ತದುಕ್ತಂ ಭಗವತಾ ಲಂಕಾವತಾರೇ-**

**''ಬುಧ್ಯಾ ವಿವಿಚ್ಯಮಾನಾನಾಂ ಸ್ವಭಾವೋ ನಾವಧಾರ್ಯತೇ ।**
**ಅತೋ ನಿರಭಿಲಪ್ಯಾಸ್ತೇ ನಿಃಸ್ವಭಾವಾಶ್ಚ ದೇಶಿತಾಃ'' ॥**

**ಇತಿ ವಿಜ್ಞಾನವ್ಯತಿರಿಕ್ತಂ ಪುನರಿದಂ ವಿಶ್ವಂ ಸದಸದ್ಭ್ಯಾಂ ವಿಲಕ್ಷಣಂ ಬ್ರಹ್ಮವಾದಿನಃ ಸಂಗಿರಂತೇ'** (ಖಂ.ಖಂ.ಖಾ.ಪುಟ. 36)

ಇದೇ ರೀತಿ ಪಂಚಪಾದಿಕಾ ಮತ್ತು ವಿವರಣಗ್ರಂಥಗಳಲ್ಲಿ ಸೌಗತ ಸಾಂಕರ್ಯ ನಿರಾಸಪ್ರಯತ್ನವನ್ನು ಕಾಣಬಹುದಾಗಿದೆ. ಹಿಂದೆ ಉದಾಹರಿಸಿದ ಮತ್ತು ಇನ್ನಿತರ ಸೌಗತ ಸಾಂಕರ್ಯ ನಿರಾಸಕ ವ್ಯಾಕಗಳ ತಾತ್ಪರ್ಯವನ್ನು ಒಟ್ಟು ಈ ರೀತಿ ವರ್ಣಿಸಬಹುದಾಗಿದೆ-

**1.** ಬ್ರಹ್ಮವೆಂದು ಹೇಳಿದಾಗ ವಿಧಿಯು ಕಾಣುತ್ತದೆ. ಶೂನ್ಯವೆಂದು ಹೇಳಿದಾಗ ನಿಷೇಧವು ತೋರುತ್ತದೆ. ಬ್ರಹ್ಮವು ಸತ್ಯ (ಭಾವ) ವಾಗಿದೆ. ಶೂನ್ಯವು ಅಭಾವರೂಪವಾಗಿದೆ. ಆದ್ದರಿಂದ ಪರತತ್ತ್ವದಲ್ಲಿ ಶೂನ್ಯವಾದಿಗಳಿಗೂ ಅದ್ವೈತವಾದಿಗಳಿಗೂ ವೈಲಕ್ಷಣ್ಯವಿದೆ.

ಮುಂದಿನ ಪುಟ ನೋಡಿ:

**2.** ಬೌದ್ಧರು ವೇದಪ್ರಮಾಣ್ಯವನ್ನು ಅಂಗೀಕರಿಸುವುದಿಲ್ಲ. ಅದ್ವೈತ ದರ್ಶನದಲ್ಲಿ ವೇದಪ್ರಮಾಣ್ಯವು ಅಂಗೀಕರಿಸಲ್ಪಟ್ಟಿದೆ. ಅದ್ವೈತದರ್ಶನದ ಪ್ರಕ್ರಿಯೆಯಂತೆ, ವಿಶ್ವವು ಶುಕ್ತಿಯಲ್ಲಿ ಕಾಣುವ ರಜತದಂತೆ, ಬ್ರಹ್ಮನಲ್ಲಿ ಆರೋಪಿತವಾಗಿದ್ದು ಮಿಥ್ಯೆಯಾದರೂ ವ್ಯಾವಹಾರಿಕವಾಗಿ ಸತ್ಯವಾಗಿರುತ್ತದೆ. ಆದ್ದರಿಂದಲೇ ಚಾತುರ್ವರ್ಣ್ಯವ್ಯವಸ್ಥೆ, ಉಪಾಸನೆ, ಗುರುಶಿಷ್ಯಭಾವ, ಸ್ವಾಧ್ಯಾಯಪ್ರವಚನಗಳು, ಉಪಪನ್ನವಾಗುವವು. ಸರ್ವವೂ ಶೂನ್ಯ ಮತ್ತು ಕ್ಷಣಿಕವೆಂದು ವಾದಿಸುವ ಬೌದ್ಧರಲ್ಲಿ ಉಪಾಸನೆ, ವ್ಯವಹಾರ, ಪ್ರವೃತ್ತಿಗಳೆಲ್ಲ ಅರ್ಥಹೀನವಾಗುತ್ತವೆ.

**3.** ಬೌದ್ಧದರ್ಶನದಲ್ಲಿ ಜ್ಞಾನವೊಂದೇ ಸತ್ಯವಾಗಿರುತ್ತದೆ. ಅಲ್ಲಿಯೇ ಸಮಸ್ತ ಪ್ರಪಂಚವು ಆರೋಪಿತವಾಗಿದೆ. ಈ ಅಂಶದಲ್ಲಿ ಅದ್ವೈತಿಗಳಿಗೂ ಬೌದ್ಧದರ್ಶನಕ್ಕೂ ಸಾಮ್ಯವಿದ್ದರೂ, ಬೌದ್ಧರು ವಿಜ್ಞಾನತತ್ತ್ವವು ಕ್ಷಣಿಕ ವೆಂದೂ ಪ್ರವಾಹರೂಪವಾಗಿದ್ದು ಅನೇಕವೆಂದೂ ಅಂಗೀಕರಿಸಿದ್ದಾರೆ. ಆದರೆ ಅದ್ವೈತದರ್ಶನದ ಜ್ಞಾನವು (ಜ್ಞಾನ- ರೂಪವಾದ ಬ್ರಹ್ಮವು) ನಿತ್ಯವು ಏಕವೂ ಎಂಬುದಾಗಿ ಪ್ರತಿಪಾದಿಸಲ್ಪಟ್ಟಿದೆ. ಆದ್ದರಿಂದಲೂ ಈ ಎರಡೂ ದರ್ಶನಗಳಲ್ಲಿ ಆತ್ಯಂತಿಕವಾದ ವೈಚಾರಿಕ ಭೇದವಿರುತ್ತದೆ.

**4.** ಅದ್ವೈತದರ್ಶನದ ಬ್ರಹ್ಮನು, ನಿರ್ವಿಶೇಷನು, ಸತ್ಯಜ್ಞಾನಾದಿರೂಪನು ಸಕಲ ಶಬ್ದಾऽವಾಚ್ಯನು. ಕೇವಲ ವೇದಗಳಿಂದ ಲಕ್ಷಣಾವೃತ್ತಿಯಿಂದ ತಿಳಿಯಲು ಸಾಧ್ಯನಾಗಿರುವನು. ಶೂನ್ಯವಾದಿಗಳ ಶೂನ್ಯವು ಸತ್ಯವಲ್ಲ, ಜ್ಞಾನಾದಿ ರೂಪವಲ್ಲ. ಆದ್ದರಿಂದಲೂ ಈ ಎರಡೂ ದರ್ಶನಗಳಲ್ಲಿ ಭೇದವಿದೆ. ಈ ಹಿನ್ನೆಲೆಯಲ್ಲಿ ಎರಡೂ ದರ್ಶನಗಳ ಚಿಂತನೆಗಳಲ್ಲಿರುವ ಭೇದವನ್ನು ಗಮನಿಸಬೇಕು. ಆದ್ದರಿಂದ ವೇದದಲ್ಲಿರುವ ನಿರ್ವಿಶೇಷ ಚೈತನ್ಯದ ಪರಿಕಲ್ಪನೆಯನ್ನು ರೂಪಾಂತರದಿಂದ ಒಪ್ಪಿದ ಬೌದ್ಧರು 'ಪ್ರಚ್ಛನ್ನವೈದಿಕ'ರು.

ಮುಂದಿನ ಪುಟ ನೋಡಿ

# ಮೂರು ದರ್ಶನಗಳಲ್ಲಿರುವ ಸಮಾನತೆಗಳು

**ಅದ್ವೈತ-ವಿಶಿಷ್ಟಾದ್ವೈತ ಹಾಗೂ ದ್ವೈತ ಸಿದ್ಧಾಂತಗಳಲ್ಲಿ ಸ್ಥೂಲವಾಗಿ ಕೆಲವು ಸಮಾನತೆಗಳನ್ನು ನಾವು ಕಾಣಬಹುದಾಗಿದೆ.**

**ವಿಷ್ಣು ಪರದೇವತೆ ಎಂಬ ಸಂಗತಿ ಆಚಾರ್ಯತ್ರಯರಿಗೆ ಸಮ್ಮತವಾಗಿದೆ.**

1. 'ನಾರಾಯಣಃ ಪರೋಽವ್ಯಕ್ತಾತ್ ಅಂಡಮವ್ಯಕ್ತಸಂಭವಮ್ ।
ಅಂಡಸ್ಯಾಂತಸ್ತ್ವಿಮೇ ಲೋಕಾಃ ಸಪ್ತದ್ವೀಪಾಚ ಮೇದಿನೀ ॥'
(ಭಗವದ್ಗೀತಾ ಶಾಂಕರಭಾಷ್ಯಮ್, ಪುಟ 1)

2. '...ಜಗತಃ ಸ್ಥಿತಿಂ ಪರಿಪಿಪಾಲಯಿಷುಃ ಆದಿಕರ್ತಾ ನಾರಾಯಣಾಖ್ಯೋ ವಿಷ್ಣುರ್ಭೌಮಸ್ಯ ಬ್ರಹ್ಮಣೋ ಬ್ರಾಹ್ಮಣತ್ವಸ್ಯ ರಕ್ಷಣಾರ್ಥಂ ದೇವಕ್ಯಾಂ ವಸುದೇವಾಂಶೇನ ಕೃಷ್ಣಃ ಕಿಲ ಸಂಬಭೂವ ।.... ಸ ಏವ ಭಗವಾನ್ ಜ್ಞಾನೈಶ್ವರ್ಯ ಶಕ್ತಿಬಲವೀರ್ಯತೇಜೋಭಿಃ ಸದಾ ಸಂಪನ್ನಃ ...'
(ಭಗವದ್ಗೀತಾ ಶಾಂಕರಭಾಷ್ಯಮ್, ಪುಟ 2)

3. 'ಕಲ್ಯಾಣಗುಣಗಣೌಘಮಹಾರ್ಣವಃ ಪುರುಷೋತ್ತಮೋ ನಾರಾಯಣ ಏವ ನಿಖಿಲಜಗದೇಕಕಾರಣಂ ಜಿಜ್ಞಾಸ್ಯಂ ಬ್ರಹ್ಮ।'
(ಶ್ರೀಭಾಷ್ಯ 1- 1- 12)

4. 'ಹರಿರೇವ ಪರೋ ಹರಿರೇವಗುರುಃ
ಹರಿರೇವ ಜಗತ್ಪಿತೃಮಾತೃಗತಿಃ ।
ನ ತತ್ತೋಽಸ್ಯಪರಂ ಜಗತೀಡ್ಯತಮಂ...... ॥' (ದ್ವಾದಶಸ್ತೋತ್ರ)

5. 'ವಿಷ್ಣೋಸ್ಸರ್ವೋತ್ತಮತ್ವೇ ಏವ
ಸರ್ವಾಗಮಾನಾಂ ತಾತ್ಪರ್ಯಮ್ ।'
(ವಿಷ್ಣುತತ್ತ್ವ ನಿರ್ಣಯ)

ಬ್ರಹ್ಮ ಸ್ವರೂಪದ ಬಗ್ಗೆ ಕೆಲವು ಸೂಕ್ಷ್ಮ ಭಿನ್ನ ವಿಚಾರಗಳಿದ್ದರೂ ಸ್ಥೂಲವಾಗಿ ಈ ಸಾಮ್ಯವನ್ನು ಗಮನಿಸಬಹುದಾಗಿದೆ.

ಮುಂದಿನ ಪುಟ ನೋಡಿ

**ವೇದವು ಅಪೌರುಷೇಯವು ಮತ್ತು ಪರಮಪ್ರಮಾಣವೆಂಬುದು ಮೂವರು ಆಚಾರ್ಯರಿಗೆ ಸಮ್ಮತವಾಗಿದೆ**

1. 'ಶ್ರುತಿಶ್ಚ ನಃ ಪ್ರಮಾಣಮತೀಂದ್ರಿಯಾರ್ಥವಿಜ್ಞಾನೋತ್ಪತ್ತೌ ।'
   (ಶಾಂಕರ ಸೂತ್ರಭಾಷ್ಯ 2- 3- 1)
2. 'ಶಾಸ್ತ್ರೈಕಪ್ರಮಾಣಕಃ ಪರಬ್ರಹ್ಮಭೂತಸ್ಸರ್ವೇಶ್ವರಃ ಪುರುಷೋತ್ತಮಃ।'
   (ಶ್ರೀಭಾಷ್ಯ 1- 1- 3)
3. 'ನೇಂದ್ರಿಯಾಣಿ ನಾಮಮಾನಂ ವೇದಾ ಹ್ಯೇವೈನಂ ವೇದಯಂತಿ ತಸ್ಮಾದ್ ಆಹುರ್ವೇದಾಃ ।' (ವಿಷ್ಣುತತ್ತ್ವನಿರ್ಣಯ)
4. 'ವೇದಾಃ ನಿತ್ಯತ್ವಾನ್ಮಾನ ಮುತ್ತಮಮ್ ।' (ಸರ್ವಶಾಸ್ತ್ರಾರ್ಥಸಂಗ್ರಹ)

**ಭಕ್ತಿಯೇ ಮುಕ್ತಿಗೆ ಉಪಾಯವೆಂಬುದು ಮೂವರು ಆಚಾರ್ಯರಿಗೆ ಸಮ್ಮತವಿದೆ.**

1. 'ಏವಂ ಭಗವತಃ ಸತ್ಯಪ್ರತಿಜ್ಞತ್ವಂ ಬುದ್ಧ್ವಾ ಭಗವದ್ ಭಕ್ತೇರವಶ್ಯಂಭಾವಿ ಮೋಕ್ಷಫಲಮವಧಾರ್ಯ ಭಗವಚ್ಛರಣೈಕ ಪರಾಯಣೋ ಭವೇದಿತಿ ವಾಕ್ಯಾರ್ಥಃ । (ಶಾಂಕರಗೀತಾಭಾಷ್ಯ 18-65)
2. '.... ವಿಶದತಮಪ್ರತ್ಯಕ್ಷತಾಪನ್ನ ಅನುಧ್ಯಾನರೂಪಭಕ್ತ್ಯೈಕಲಭ್ಯಃ।'
   (ವೇದಾರ್ಥಸಂಗ್ರಹಃ ಪುಟ 96)
3. 'ಭಕ್ತಿಸ್ತ್ವೇಕಾ ವಿಮುಕ್ತಯೇ ।' (ಮ.ತಾ.ನಿ. 1.98)

**ಕರ್ಮವು ಜ್ಞಾನಕ್ಕೆ ಅಂಗ ಮತ್ತು ಮನಃಶುದ್ಧಿಗೆ ಕಾರಣ ಎಂಬ ಪ್ರಮೇಯವು ಮೂವರು ಆಚಾರ್ಯರಿಗೆ ಸಮ್ಮತವಾಗಿದೆ.**

1. '........ ಅಗ್ನಿಹೋತ್ರಾದಿಲಕ್ಷಣಂ ಕರ್ಮ ಬ್ರಹ್ಮಚರ್ಯಾದಿಲಕ್ಷಣಂ ಚ ಅನುಗ್ರಾಹಕಂ ಭವತಿ ವಿದ್ಯೋತ್ಪತ್ತಿಂ ಪ್ರತಿ ।'
   (ತೈತ್ತಿರೀಯ ಶಾಂಕರಭಾಷ್ಯ 1. 11.)
2. 'ಆಶ್ರಮವಿಹಿತಕರ್ಮಾನುಷ್ಠಾನೇನೈವ ವಿದ್ಯಾನಿಷ್ಪತ್ತಿಃ'
3. 'ಶಾಸ್ತ್ರಜನ್ಯಜ್ಞಾನಪೂರ್ವಕ ಕರ್ಮಯೋಗಃ ಸ್ಥಿತಪ್ರಜ್ಞತಾಖ್ಯ ಜ್ಞಾನ-ನಿಷ್ಠಾಮಾಪಾದಯತಿ ।' (ರಾಮಾನುಜ ಗೀ. ಭಾ. 2.53)
4. 'ಅಜ್ಞಾನಾಂ ಜ್ಞಾನದಂ ಕರ್ಮ ಜ್ಞಾನಿನಾಂ ಲೋಕಸಂಗ್ರಹಾತ್ ।
   ಅದ್ಧ್ಯೈವ ತುಷ್ಟಿದಂ ಮಹ್ಯಂ ಸಾ ಮುಕ್ತಾವಾನಂದಪೂರ್ತಿದಾ ॥'
   (ಗೀತಾತಾತ್ಪರ್ಯ 3.20)

ಉಪಸಂಹಾರ:

ಹೀಗೆ ಸನಾತನ ವೇದಗಳಿಗೆ ಉಪನಿಷತ್ತುಗಳಿಗೆ ಪ್ರಾಚೀನವಾದ ಗೌಡಪಾದಾಚಾರ್ಯರೆ ಮೊದಲಾದ ಚಿಂತನಶೀಲರು ನೀಡಿದ ವ್ಯಾಖ್ಯಾನಗಳನ್ನು ಮತ್ತಷ್ಟು ಸ್ಫುಟವಾಗಿ ವಿವರಿಸಿದ ಶ್ರೀಶಂಕರಾಚಾರ್ಯರು ತಮ್ಮ 'ಬ್ರಹ್ಮಾದ್ವೈತ ವಾದ' ವನ್ನು ಮಂಡಿಸಿದರು.

ವಿಶ್ವಪ್ರಸಿದ್ಧವೂ ಅಪಾರಸಂಖ್ಯೆಯ ಅನುಯಾಯಿಗಳನ್ನು ಹೊಂದಿದ ಶಾಂಕರದರ್ಶನ ಪರಂಪರೆಯು ದೇಶ-ವಿದೇಶಗಳಲ್ಲಿ ವ್ಯಾಪ್ತವಾಗಿದೆ. ಈ ಸಂಪ್ರದಾಯ ಪರಂಪರೆಗಳು ವಿಶ್ವವಿಖ್ಯಾತ ವಿದ್ವಾಂಸರನ್ನು ಮತ್ತು ತಪಸ್ವಿಗಳಾದ ಸಮಾಜದ ಡೊಂಕತಿದ್ದಿ ಮೆರೆದ ಶ್ರೀವಿದ್ಯಾರಣ್ಯರಂತಹ ಅನೇಕ ಸಂತರನ್ನು ನೀಡಿದೆ. ಸತ್ಯಶೊಧನೆಯ ದೃಷ್ಟಿಯಿಂದ ಅದ್ವೈತದ ಕೊಡುಗೆ

ಅವಿಸ್ಮರಣೀಯವಾದುದು. ಬೌದ್ಧ-ಜೈನ ಮೊದಲಾದ ಅವೈದಿಕಕರನಗಳ ಮತ್ತು ವೈದಿಕವೆನಿಸಿದ ಸಾಂಖ್ಯ-ಯೊಗ-ನ್ಯಾಯ-ವೈಶೇಷಿಕದರ್ಶನಗಳ ಅಸಾರತೆಯನ್ನು ಮನಗಾಣಿಸುವುದರ ಜೊತಗೆ ಉಪನಿಷತ್ತಿನ ಸಂದೇಶಗಳನ್ನು ತಮ್ಮ ಸುಂದರ-ಸರಳ ಭಾಷೆಯ ಮೂಲಕ ಶ್ರೀಶಂಕರಾಚಾರ್ಯರು ಅಭಿವ್ಯಕ್ತಿಗೊಳಿಸಿದರು. ಬುದ್ಧಿಜೀವಿಗಳು, ಇತರ ದಾರ್ಶನಿಕರು ಅದ್ವೈತ ದರ್ಶನದ ಬಗ್ಗೆ ಭಿನ್ನ ನಿಲುವು ತಾಳಿರಬಹುದಾದರೂ ಶ್ರೀಶಂಕರಾಚಾರ್ಯರ ಸಾಧನೆ-ಸತ್ಯಶೊಧನ ಪ್ರಯತ್ನವನ್ನು ಗೌರವಿಸದಿರಲಾಗದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ದರ್ಶನವು ತನ್ನದೇ ಆದ ವೈಚಾರಿಕೆಯನ್ನು ಹೊಂದಿ ಗೌರವಾರ್ಹವೆನಿಸುವುದು. ಒಟ್ಟಾರೆ ಅದ್ವೈತದರ್ಶನವು, ವೇದ ಉಪನಿಷತ್ತುಗಳಲ್ಲಿರುವ, ಆದರೆ ಸಾಂಖ್ಯರು-ಮೀಮಾಂಸಕರು ಮರೆತ ಬ್ರಹ್ಮಸ್ವರೂಪದ ಬಗ್ಗೆ ವಿನೂತನವಾದ ವಶ್ಲೇಷಣೆ ನೀಡಿರುವುದು ದರ್ಶನ ಕ್ಷೇತ್ರದಲ್ಲಿ ಸದಾ ಗೌರವಾರ್ಹ ಸಂಗತಿಯಾಗಿದೆ.

ಶಂಕರರ ಜನನ, ಹಿರಿಮೆ ಮತ್ತು ಅವರ ಮತದ, ಸಂಪ್ರದಾಯದ ಮಹಿಮೆಯ ಬಗ್ಗೆ ಈ ಗ್ರಂಥದಲ್ಲಿ ಹೇಳಿರುವುದು ಪ್ರಶಂಸನೀಯವಾಗಿದೆ:

ಹೀಗೆ ವೈದಿಕಧರ್ಮದ ಅವನತಿ ಮತ್ತು ಒತ್ತಡಕ್ಕೊಳಪಟ್ಟ ಕಾಲದಲ್ಲಿ ಆರ್ಯಾಂಬಾ-ಶಿವಗುರು ದಂಪತಿಗಳಲ್ಲಿ ಜನಿಸಿದ ಅಸಾಧಾರಣ ಪ್ರತಿಭಾನ್ವಿತ ಶಿಶು, ಗೋವಿಂದಭಗವತ್ಪಾದರಲ್ಲಿ ಸನ್ಯಾಸದೀಕ್ಷೆ ಪಡೆದು ಶಂಕರಾಚಾರ್ಯರೆನಿಸಿದರು. 32 ವರ್ಷಗಳಲ್ಲಿ ಅಖಂಡ ಭಾರತವನ್ನು ಸಂಚರಿಸಿ ಜ್ಞಾನದ (ಆತ್ಮತತ್ತ್ವದ) ಮಹತ್ತ್ವವನ್ನು ಪ್ರಚುರಪಡಿಸಿದ ಶ್ರೀ ಶಂಕರಾಚಾರ್ಯರ ಸಾಧನೆ ಅಸಾಧಾರಣವಾದುದು-

**ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।**
**ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥**

ಬುದ್ಧಿಜೀವಿಗಳಲ್ಲಿ ದರ್ಶನವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ಸಹಜವಿರಬಹುದಾದರೂ, ಶ್ರೀ ಶಂಕರಾಚಾರ್ಯರು ವೈದಿಕಧರ್ಮಸ್ಥಾಪನೆ ಮತ್ತು ಸಂರಕ್ಷಣೆಗಾಗಿ ಅಂದು ಮಾಡಿದ ಮಹಾಕಾರ್ಯಗಳು ಎಂದೆಂದಿಗೂ ಸ್ಮರಣಾರ್ಹವಾಗಿವೆ. ಇಂದಿಗೂ ಶ್ರೀ ಶಂಕರರ ಪರಂಪರೆಯ ಅನೇಕ ಮಠಗಳು ವಿಶೇಷವಾಗಿ ಚತುರಾಮ್ನಾಯ ಪೀಠಗಳು ವೇದ-ಸಂಸ್ಕೃತಿ ಸಂರಕ್ಷಣೆಯ ಕಾರ್ಯಗಳನ್ನು ಅವ್ಯಾಹತವಾಗಿ ನಡೆಸಿಕೊಂಡು ಬರುತ್ತಿವೆ. ಕಾಂಚೀ ಪರಮಾಚಾರ್ಯರೂ ದಿಗಂತವಿಶ್ರಾಂತಕೀರ್ತಿಗಳೂ ಆದ ಶ್ರೀ ಚಂದ್ರಶೇಖರೇಂದ್ರ ಸರಸ್ವತೀ ಸ್ವಾಮಿಗಳವರು ಅನೇಕ ಮಾಧ್ವರಿಗೆ, ಶ್ರೀವೈಷ್ಣವರಿಗೆ ವೇದ-ಶಾಸ್ತ್ರವ್ಯಾಸಂಗ ಮಾಡಿಸಿ ಅವರ ಪಾಠಶಾಲೆಗಳ ಆರ್ಥಿಕ ಭಾರ ಹೊತ್ತಿದ್ದರು. ಇದು ಗೌರವಾದರಗಳಿಂದ ಉಲ್ಲೇಖಾರ್ಹವಾಗಿದೆ. ಪರಮಪೂಜ್ಯ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಪೂರ್ಣಪ್ರಜ್ಞ ವಿದ್ಯಾಪೀಠವೂ ಅನೇಕ ಶಾಂಕರಪಂಥದ ವಿದ್ಯಾರ್ಥಿಗಳಿಗೆ ಶಾಸ್ತ್ರಗಳ ಶಿಕ್ಷಣ ನೀಡಿ ಗೌರವಿಸುತ್ತಿರುವುದು ಅಭಿನಂದನಾರ್ಹವಾಗಿದೆ.

ಅನೇಕ ಮಾಧ್ವ ವಿದ್ಯಾರ್ಥಿಗಳು ಮತ್ತು ವಿದ್ವಾಂಸರು ಚೆನ್ನೈನ ಶ್ರೀ ಮಣಿ ದ್ರಾವಿಡಶಾಸ್ತ್ರಿಗಳಲ್ಲಿ ಹಾಗೂ ಪುಣೆಯ ಖ್ಯಾತನಾಮರಾದ ಶ್ರೀ ದೇವದತ್ತ ಪಾಟೀಲರಲ್ಲಿ ಮೀಮಾಂಸಾ ತರ್ಕಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಿರುವುದು ಅಭಿಮಾನದಿಂದ ಉಲ್ಲೇಖಾರ್ಹ ಸಂಗತಿಯಾಗಿದೆ. ದರ್ಶನಗಳ ವಿಭಿನ್ನ ಚಿಂತನೆಗಳ ನಡುವೆಯೂ ದಾರ್ಶನಿಕರಲ್ಲಿ ಇರಬೇಕಾದ ಇಂತಹ ಸೌಜನ್ಯ-ಸೌಹಾರ್ದಗಳು ಎಲ್ಲ ಕಾಲಕ್ಕೂ ಅನುಕರಣೀಯವಾಗಿವೆ.

ಇಲ್ಲಿಗೆ ಶ್ರೀ ನಾಗಸಂಪಿಗೆ ಆಚಾರ್ಯರ ಗ್ರಂಥದ ಉದಾಹರಣೆ ಮುಗಿಯಿತು.

ಇನ್ನು, ಬೌದ್ಧರೇ ತಮ್ಮಲ್ಲಿ ಪರಸ್ಪರ ಮಾಡಿಕೊಂಡ ಒಂದು ಸಂವಾದ/ವಿವಾದ ಹೀಗಿದೆ:

ಇಲ್ಲಿ ನನ್ನ ಮಿತ್ರರ ಒಂದು ಲೇಖನವನ್ನು ಅದರ ವಿಷಯದ ಮುಖ್ಯತ್ವಕ್ಕಾಗಿ ಕಾಣಿಸಿರುವೆನು:

An interesting counterpoint can be found in the work mAdhyamakahridaya by Bhavya, a sixth century mAdhyamaka buddhist. Prof VV Gokhale in a paper titled "The Vedanta-Philosophy described by Bhavya in his Madhyamakahrdaya" (Indo-Iranian Journal, Vol. 2, No. 3, 1958) presents a description of Vedanta (pre-Sankaran) that was available during Bhavya's time. He also refers to a situation where the mahAyAna school is criticised as being similar to vedAnta. In reply, Bhavya generously says that whatever is good in the upaniShads has also been taught by the Buddha.

In one of the chapters of the Madhyamakahridaya dealing with the hInayAna objections to mahAyAna, the hInayAna-buddhist criticises the mahAyAna buddhist saying:

न बुद्धोक्तिर्महायानं सूत्रान्तादावसंग्रहात् |
मार्गान्तरोपदेषात् वा यथा वेदान्तदर्शनम् ||

The mAhAyAna teaching was not spoken of by the Buddha, either because it is not included in the sUtrAntas, or because like the vedAnta darshana, it teaches heretic paths to salvation.

To this attack, the mahAyAnist replies:

वेदान्ते च हि यत् सूक्तम् तत् सर्वं बुद्धभाषितम् |
दृष्टान्तन्यूनता तस्मात् संदिग्धं वा परीक्ष्यताम् ||

Whatever is well said in the vedAnta (upaniShads) has been taught by the Buddha. The various examples cited by the hInayAna are faulty and what is doubtful must be examined.

Here is an example of pre-Sankaran Buddhist work where the opponent criticises the mahAyAna school as being similar to vedAnta! The reply of the mahAyAna buddhist is even more remarkable - there is a concession that the best elements of the upaniShads have been taught by the Buddha himself.

To argue that advaita borrowed from Buddhism, or Buddhism borrowed from advaita is missing the larger point - the two schools are similar in many respects, but different too. Similarity does not imply that one created and the other borrowed, nor does difference imply the absolute absence of common ground.

ಇಲ್ಲಿ ಗಮನಿಸಬೇಕಾದ ವಿಷಯಗಳು:

ಶಂಕರಪೂರ್ವ ಗ್ರಂಥವಾದ ಭವ್ಯನ 'ಮಾಧ್ಯಮಿಕಹೃದಯ' ದಲ್ಲಿ ಸಂಭಾಷಣೆ ಹೀಗಿದೆ:

ಹೀನಯಾನ ಬೌದ್ಧ ಮಹಾಯಾನ ಬೌದ್ಧನನ್ನು ಖಂಡಿಸುತ್ತಾನೆ: ಮಹಾಯಾನವೆಂಬುದು ಬುದ್ಧನು ಹೇಳಿದ್ದಲ್ಲ, ಸೂತ್ರಾಂತಗಳಲ್ಲಿ ಅದನ್ನು ಸಂಗ್ರಹಿಸಿಲ್ಲವಾದ್ದರಿಂದ. ಮತ್ತು, ಅದು ವೇದಾಂತ ದರ್ಶನದಂತೆ ಬೇರೆ (ತಪ್ಪು) ದಾರಿಗೆ ಕೊಂಡೊಯ್ಯುವದಾಗಿದೆ.

ಈ ಆಕ್ಷೇಪ/ಆರೋಪಕ್ಕೆ ಮಹಾಯಾನ ಬೌದ್ಧನ ಉತ್ತರ: ವೇದಾಂತದಲ್ಲಿ ಯಾವ ಒಳ್ಳೆಯದಿದೆಯೋ ಅದನ್ನೆಲ್ಲ ಬುದ್ಧ ಬೋಧಿಸಿದ್ದಾನೆ (ತನ್ನ ಮತದಲ್ಲಿ).

ಇಲ್ಲಿ ಶಂಕರಪೂರ್ವ ಬೌದ್ಧ ಗ್ರಂಥದಲ್ಲಿ ಬೌದ್ಧವನ್ನು ವೇದಾಂತ ಸದೃಶವೆಂದು ಆಪಾದನೆ ಮಾಡಲಾಗಿದೆ. ಮಹಾಯಾನ ಬೌದ್ಧನ ಉತ್ತರವೂ ಸ್ವಾರಸ್ಯಕರವಾಗಿದೆ: ವೇದಾಂತದಲ್ಲಿ ಎಷ್ಟೋ ಒಳ್ಳೆಯದಿದೆ, ಅದನ್ನು ಬುದ್ಧ ಸ್ವೀಕರಿಸಿದ ಎಂಬುದು. 'ವೇದಾಂತ ಬೌದ್ಧದಿಂದ ಪ್ರಭಾವಿತವಾಗಿದೆ' ಮತ್ತು 'ಬೌದ್ಧವು ವೇದಾಂತದಿಂದ ಪ್ರಭಾವಿತವಾಗಿದೆ' ಎಂಬ ಆಪಾದನೆಯ ಮಾತುಗಳು ಒಂದು ಉತ್ಕೃಷ್ಟ ಸತ್ಯವನ್ನು ನಿರ್ಲಕ್ಷಿಸುತ್ತವೆ: ಈ ಎರಡು ಮತಗಳಲ್ಲಿ ಅನೇಕ ಸಾಮ್ಯತೆ ಇದೆ. ಆದರೆ ಮಹದ್ವೈಲಕ್ಷಣ್ಯವೂ ಇದೆ. ಇದನ್ನು ಅಲ್ಲಗಳೆಯುವಂತಿಲ್ಲ. ಸಾಮ್ಯತೆ 'ಒಂದು ಮೊದಲು ಬಂತು, ಇನ್ನೊಂದು ಅದರಿಂದ ತೆಗೆದುಕೊಂಡಿತು' ಎಂಬುದನ್ನು ಸೂಚಿಸುವುದಿಲ್ಲ. ಹಾಗೆಯೆ ಭಿನ್ನತೆ ಇದೆ ಎಂಬುದು ಮತಗಳಲ್ಲಿ ಸಮಾನತೆಗಳನ್ನು ಅಲ್ಲಗಳೆಯುವುದಿಲ್ಲ. ಇದಕ್ಕೊಂದು ದೃಷ್ಟಾಂತವನ್ನು ಕಾಣಬಹುದು:

'ಶ್ರೀಮನ್ಮಧ್ವಮತೇ ಹರಿಃ ಪರತರಃ, ಸತ್ಯಂ ಜಗತ್...' ಎಂಬ ಪ್ರಸಿದ್ಧವಾದ ಮಧ್ವಮತದ ಪ್ರಮೇಯಗಳನ್ನು ಸಂಗ್ರಹಿಸುವ ಶ್ಲೋಕವಿದೆ. ಇದನ್ನು ಅನೇಕರು ಶ್ರೀ ವ್ಯಾಸ ತೀರ್ಥರ ರಚನೆ ಎಂದು ಭಾವಿಸುತ್ತಾರೆ. ಅಲ್ಲ ಎಂಬ ಅಭಿಪ್ರಾಯವೂ ಇದೆ. ಏನೇ ಇರಲಿ, ಈ ಶ್ಲೋಕದಲ್ಲಿ ರಾಮಾನುಜ ಮತದ ಪ್ರಮೇಯಗಳೂ ಎದ್ದು ಕಾಣುತ್ತವೆ, ಹಾಗಾಗಿ ಮಧ್ವ ಮತವನ್ನು ಅತಿವ್ಯಾಪ್ತಿಯಿಲ್ಲದೆ ಬಿಂಬಿಸುತ್ತಿಲ್ಲ ಎಂಬ ಅಭಿಪ್ರಾಯದಿಂದ ದಿ॥ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ತಾವೇ ಒಂದು ಶ್ಲೋಕವನ್ನು ರಚಿಸಿದ್ದಾರೆ. ಇದು ಮಧ್ವ ಮತದ ವಿಶಿಷ್ಟ ಪ್ರಮೇಯಗಳನ್ನು ಎತ್ತಿ ತೋರಿಸುವ ಧಾಟಿಯಲ್ಲಿ ರಚಿತವಾಗಿದೆ. ಶ್ಲೋಕವನ್ನು ನೂತನವಾಗಿ ರಚಿಸಿದ ಮಾತ್ರಕ್ಕೆ ವಸ್ತು ಸ್ಥಿತಿ ಏನೂ ಬದಲಾಗುವುದಿಲ್ಲ. ಮಧ್ವ ಮತದ 'ಪಂಚಭೇದ' ಎಂಬ ಪ್ರಮೇಯವೂ ರಾಮಾನುಜ ಮತದಲ್ಲಿದೆ. ಅದ್ವೈತದಲ್ಲೂ ವ್ಯಾವಹಾರಿಕವಾಗಿ ಒಪ್ಪಿದೆ. ಅನೇಕ ಸಾಮ್ಯತೆಗಳಿವೆಯೆಂಬ ಕಾರಣಕ್ಕೆ ಮಧ್ವ-ರಾಮಾನುಜ ಮತಗಳು ಒಂದೇಯಾಗುವೆಯೇ? ಹೌದು ಎಂಬುದು ಮೂರ್ಖತನವಲ್ಲವೇ? ಇತರ ಎಲ್ಲ ಮತಗಳಿಂದಲೂ ಸರ್ವಾಂಶಗಳಲ್ಲೂ ಸಂಪೂರ್ಣವಾಗಿ ಬೇರಯಾಗಿ ಒಂದು ಮತ ಇರಲು ಸಾಧ್ಯವೇ ಇಲ್ಲ. ಆದರೆ ಒಂದರಿಂದ ಒಂದು ಮತವನ್ನು ಬೇರ್ಪಡಿಸಿ ತೋರಿಸುವ ವಿಶಿಷ್ಟ ಅಂಶಗಳು ಇದ್ದೇ ಇರುತ್ತವೆ. ಇಲ್ಲವಾದರೆ ಸರ್ವ ಮತಗಳ ಸಾಂಕರ್ಯವೇ ಫಲವಾಗುತ್ತೆ. ಇದು ಯಾರಿಗೂ ಇಷ್ಟವಾಗದು.

ಮಧ್ವಮತ ಕ್ರೈಸ್ತ, ಜೈನ ಮತಗಳಿಂದ ಪ್ರಭಾವಿತವಾಗಿದೆ ಎಂಬ ಪ್ರಸಿದ್ಧ ವಾದವಿದೆ. ಶ್ರೀ ಬಿ.ಎನ್.ಕೆ.ಶರ್ಮಾ ಅವರು, ಅನೇಕ ಪ್ರಸಿದ್ಧ ಮಾಧ್ವ ಮಠಗಳಿಂದ ಸನ್ಮಾನಿತರು, ಶ್ರೀ ಸತ್ಯಧ್ಯಾನತೀರ್ಥರೇ ಮುಂತಾದ ಅನೇಕ ಯತಿಗಳ ನಿಕಟವರ್ತಿಯಾಗಿದ್ದವರು ತಮ್ಮ ಪ್ರಸಿದ್ಧವಾದ ಗ್ರಂಥದಲ್ಲಿ ಹೇಳಿರುವುದು:

Quotation from Philosophy of Shri Madhvacharya- pp12,13 by Dr. B.N.K. Sharma,

ಪಿಷ್ಟಪಶು ಇತ್ಯಾದಿ ವಿಚಾರ ಹಾಗೂ ಶ್ರೀ ವಾದಿರಾಜರ ಪಾಖಂಡಖಂಡನ ಗ್ರಂಥಕ್ಕೆ ಸಂಬಂಧವಿರುವದರಿಂದ ಇಲ್ಲಿ ಆನುಷಂಗಿಕವಾಗಿ ಡಾ.ಶರ್ಮಾರವರು ಈ ಬಗ್ಗೆ ತಮ್ಮ Philosophy of Shri Madhvacharya- pp12,13 ರಲ್ಲಿ ಬರೆದದ್ದನ್ನು ಓದುಗರ ಗಮನಕ್ಕೆ ತರಲು ಬಯಸುತ್ತೇನೆ. ಈ ಕಂಡಿಕೆಯಲ್ಲಿ ಡಾ. ಶರ್ಮರು ಜೈನ ಹಾಗೂ ದ್ವೈತ ಸಿದ್ಧಾಂತಗಳಲ್ಲಿಯ ಸಾಮ್ಯವನ್ನು ವಿವರಿಸಿದ್ದಾರೆ.

Jain Philisophy and moral code have some affinity to Madhva's thought. The new type of Vedic sacrifices with flour-made animals [pishta-pashu-yajnas] instead of living animals, introduced by Madhva as a much needed reform in the Brahminical society was, in all probability, partly due to the moral pressure and influence of Jain ideas. A powerful community of Jains inhabited the South Kanara district then, as now. It was also under Jain rule in the twelfth and thirteenth centuries Madhva's views on some questions of logic, epistemology and ontology show many striking parallels to and affinities with corresponding Jain theories notably on the nature of the Universal [Jati] and in the theory of the self as an object of perception [Aham sukhi] which is denied by the Advaitin. The recognition of certain types of cognitions like manahparyaya and Kevala in Jain philosophy corresponds in a measure, to the Yogipratyaksha and Kevla Pramana of Madhva. The self revelatory capacity of knowledge of the perceiver ಜ್ಞಾತುರಾತ್ಮನಃ ಸ್ವಪ್ರಕಾಶತಃ is based on trinity of Jnatr-Jneya- and Jnana, all of them being admitted to be revealed in knowledge. So also, the Jain conception of substance in relation to its attributes as distinction of reference and not of existence ಅನಂತ ಧರ್ಮಾತ್ಮಕಂ ವಸ್ತು as Haribhadrasuri puts it,is perfected by Madhva, by formulating the doctrine of "Savishesha-bheda" to hold the substance and attributes together in the integrated mould. The further distinction of qualities and attributes as "Paryaya" and "Svabhava" in Jain ontology is parallel to Madhva's distinction of attributes into "Ayavad- dravyabhavi" and " Yavad-dravyabhavi." The Jain dichotomy of reality into "Jiva and Ajiva" appears in the form of "Svatantra and Paratantra" with greater philosophical aptness and justification as pointed by Jayatirtha. The peculiar doctrine of Jains that the whole Universe is filled with Jivas is also shared by Madhva ಪರಮಾಣು ಪ್ರದೇಶೇಷು ಹ್ಯನಂತಾಃ ಪ್ರಾಣಿರಾಶಯಃ [VTN=Vshnu Tattva Nirnaya]..[Dr. B.N.K. Sharma, Philosophy of Shri Madhvacharya- pp12,13] [qupted from Advaita Darshana by Shri Chidambarananda-Dharwad.]

ಇದರ ಕನ್ನಡ ಅನುವಾದ: ಶೀ ಚಿದಂಬರಾನಂದ (ಧಾರವಾಡ) ಅವರ 'ಅದ್ವೈತ ದರ್ಶನ' ಎಂಬ ಪುಸ್ತಕದಲ್ಲಿ ಲೇಖಕರು ಮಾಡಿದ ಅನುವಾದ:

[ಅನುವಾದ: ಜೈನ-ತತ್ತ್ವಜ್ಞಾನ ಮತ್ತು ಅದರ ನೀತಿ ಸಂಹಿತೆಗಳಿಗೂ, ಮಧ್ವರ ವಿಚಾರಗಳಿಗೂ ಕೆಲಮಟ್ಟಿನ ಸಾಮ್ಯವಿದೆ. ವೈದಿಕ ಯಜ್ಞಗಳಲ್ಲಿ ಜೀವಂತ ಪಶುಗಳ ಬದಲಾಗಿ ಪಿಷ್ಟಪಶುವಿನ ಬಲಿಯನ್ನು ಕೊಡುವ ನವೀನ ರೀತಿಯು ಮಧ್ವರಿಂದ ಪ್ರಯೋಗಿಸಲ್ಪಟ್ಟಿತು. ಬ್ರಾಹ್ಮಣ ಸಮಾಜದಲ್ಲಿ ಅತ್ಯಂತಅವಶ್ಯವಾಗಿದ್ದ ಈ ಸುಧಾರಣೆಯಲ್ಲಿ [ಪಿಷ್ಟಪಶುಯಜ್ಞವು], ಭಾಗಶಃ ನೀತಿಸಂಹಿತೆಯ ಒತ್ತಡ ಹಾಗೂ ಮತ್ತು ಜೈನ ಧರ್ಮದ ಪ್ರಭಾವವನ್ನು ಬಹುಮಟ್ಟಿಗೆ ಕಾಣಬಹುದಾಗಿದೆ. ಶ್ರೀಮಧ್ವರ ಕಾಲದಲ್ಲಿಯೂ, ಈಗಿನಂತೆ, ದಕ್ಷಿಣಕನ್ನಡ ಜಿಲ್ಲೆಯಲ್ಲಿ [ಮಂಗಳೂರು] ಜೈನ ಸಮಾಜವು ಬಲಿಷ್ಟವಾಗಿತ್ತು. 12 ಮತ್ತು 13 ನೆಯ ಶತಮಾನಗಳಲ್ಲಿ ಈ ಪ್ರದೇಶವು ಜೈನ ರಾಜರ ಶಾಸನಕ್ಕೆ ಒಳಪಟ್ಟಿತ್ತು. ತರ್ಕಶಾಸ್ತ್ರ, ಜ್ಞಾನಮೀಮಾಂಸೆ, ಹಾಗೂ ಸತ್ತಾಮೀಮಾಂಸೆಗಳನ್ನು ಕುರಿತಂತೆ, ಮಧ್ವರ ಕೆಲವು ಅಭಿಪ್ರಾಯಗಳು, ಅದೇ ಶಾಸ್ತ್ರಗಳನ್ನು ಕುರಿತಂತೆ ಜೈನ ತತ್ತ್ವಜ್ಞಾನದ ಅಭಿಪ್ರಾಯಗಳಿಗೆ ಎದ್ದುಕಾಣುವ ಸಮಾನತೆಯನ್ನೂ, ಸಾದೃಶ್ಯಗಳನ್ನೂ ಹೊಂದಿವೆ. [ಉದಾ:-"ಸಾಮಾನ್ಯ"ದ ಸ್ವಭಾವ, "ಅಹಂಸುಖೀ" ಇತ್ಯಾದಿ ರೂಪದ ಆತ್ಮವು ಬೋಧೆಗೆ ವಿಷಯವಾಗುವದೇ ಎಂಬ ವಿಷಯಗಳು- ಇವುಗಳನ್ನು ಅದ್ವೈತ ಸಿದ್ಧಾಂತವು ಒಪ್ಪುವದಿಲ್ಲ.] ಕೆಲವು ನಮೂನೆಯ ಜ್ಞಾನಗ್ರಹಣ ವಿಷಯಗಳು, ಉದಾ:-ಮನಃಪರ್ಯಾಯ ಮತ್ತು ಕೇವಲ ಎಂಬ ಜೈನ ತತ್ತ್ವಶಾಸ್ತ್ರದ ಪ್ರಮೇಯಗಳು, ಮತ್ತು ಮಧ್ವಶಾಸ್ತ್ರದ ಯೋಗಿಪ್ರತ್ಯಕ್ಷ ಮತ್ತು ಕೇವಲ ಪ್ರಮಾಣ ಎಂಬ ಪ್ರಮೇಯಗಳಿಗೆ ಕೆಲಮಟ್ಟಿಗೆ ಸಂವಾದಿಯಾಗಿವೆ. ಜ್ಞಾತೃವಿಗೆ ಸ್ವತಃ ಜ್ಞಾನಮಾಡಿಕೊಳ್ಳುವ ಶಕ್ತಿಯಿದೆ ಎಂಬಂತಹ ಸಿದ್ಧಾಂತವು ಜ್ಞಾತೃ-ಜ್ಞಾನ-ಜ್ಞೇಯ ಎಂಬ ತ್ರಿಪುಟಿಯನ್ನಾಧರಿಸಿದೆಯೆಂಬ ಈ ಎಲ್ಲ ಪ್ರಮೇಯಗಳು ಜ್ಞಾನ ವಿಷಯದಲ್ಲಿ, ಒಪ್ಪಿಕೊಳ್ಳಲ್ಪಟ್ಟಿವೆ. ವಸ್ತು ಮತ್ತು ಅದರ ಗುಣಧರ್ಮಗಳ ಸಂಬಂಧವು ವಿಷಯಗಳ ಮಧ್ಯೆ ಇರುವ ಭೇದವೇ ಹೊರತು ಅಸ್ತಿತ್ವದಲ್ಲಿ ಇರುವ ಭೇದವಲ್ಲ ಎಂಬ ಜೈನ ಸಿದ್ಧಾಂತದ ಪ್ರಮೇಯವನ್ನು, [ಹರಿಭದ್ರ ಸೂರಿಯು ಇದನ್ನು "ಅನಂತ ಧರ್ಮಾತ್ಮಕಂ ವಸ್ತು" ಎಂದು ಕರೆದಿದ್ದಾರೆ.] ಮಧ್ವರು ಇನ್ನೂ ಹೆಚ್ಚು ಪರಿಷ್ಕರಿಸಿ "ಸವಿಶೇಷ-ಭೇದ"ಎಂದು ಹೆಸರಿಸಿ ವಸ್ತು ಮತ್ತು ಅದರ ಗುಣಧರ್ಮಗಳೆರಡನ್ನೂ ಒಂದೇ ಚೌಕಟ್ಟಿನಲ್ಲಿ ಕೂಡಿಸಿದರು. ಜೈನತತ್ತ್ವಶಾಸ್ತ್ರವು [ಸತ್ತಾಮೀಮಾಂಸೆಯು]ಗುಣ ಮತ್ತು ವಿಶೇಷಣಗಳಲ್ಲಿಯ ಭೇದವನ್ನು "ಪರ್ಯಾಯ ಮತ್ತು ಸ್ವಭಾವ" ಎಂದು ವಿಭಾಗಿಸಿದರೆ, ಅದನ್ನೇ ಮಾಧ್ವಶಾಸ್ತ್ರವು "ಅಯವದ್-ದ್ರವ್ಯಭಾವಿ ಹಾಗೂ ಯವದ್-ದ್ರವ್ಯಭಾವಿ" ಎಂದು ವಿಭಜಿಸುತ್ತದೆ. "ಸತ್ಯತ್ವ"ವನ್ನು ಜೈನ ಶಾಸ್ತ್ರವು "ಜೀವ ಹಾಗೂ ಅಜೀವ" ಎಂದು ವಿಭಜಿಸಿದರೆ ಮಾಧ್ವ ಶಾಸ್ತ್ರವು, ಶ್ರೀ ಜಯತೀರ್ಥರು ಸಮರ್ಥಿಸಿದಂತೆ, ಅದನ್ನೇ, ಹೆಚ್ಚು ಔಚಿತ್ಯಪೂರ್ಣವಾಗಿ "ಸ್ವತಂತ್ರ ಹಾಗೂ ಪರತಂತ್ರ" ಎಂದು ವಿಭಾಗಿಸುತ್ತದೆ. ಇಡೀವಿಶ್ವವೇ ಜೀವರಿಂದ ತುಂಬಿದೆ ಎಂಬ ಜೈನರ ವಿಚಿತ್ರ ವಾದವನ್ನು ಕೂಡ, ಮಧ್ವರು 'ಪರಮಾಣು ಪ್ರದೇಶೇಷು ಹ್ಯನಂತಾಃ ಪ್ರಾಣಿರಾಶಯಃ" ಎಂದು ಹೇಳುವ ಮೂಲಕ ಒಪ್ಪಿಕೊಳ್ಳುತ್ತಾರೆ.]

ಕ್ರೈಸ್ತ ಮತದ ಪ್ರಭಾವದ ಬಗ್ಗೆ ಹಲವು ಅಭಿಪ್ರಾಯಗಳಿವೆ: https://www.britannica.com/biography/Madhva

The belief of Madhvaachaarya that only a few attain salvation while the rest cannot, and some even suffer damnation, is contrary to the teachings of all other Indian religious schools. Madhvaachaarya may possibly have been influenced by certain Christian missioneries who during his time had penetrated to India.(see 'The spiritual heritage of India'- Swami PrabhavAnanda).

ಮಧ್ವ ರಾಮಾನುಜ ಮತಗಳಲ್ಲಿ ವೈಶೇಷಿಕ ಮತದ ಪ್ರಭಾವ ಇದೆ ಎಂಬುದನ್ನು ದಾಸ ಗುಪ್ತ ಅವರು ತೋರಿಸಿದ್ದಾರೆ:


History of Indian Philosophy, Vol.2, Das Gupta says on p.192:

The importance of the Vaiśeṣika was gradually increasing, as it was gradually more and more adopted by Vaiṣṇava realistic writers, such as Madhva and his followers, and it was supposed that a refutation of the Vaiśeṣika would also imply a refutation of the dualistic writers who draw their chief support from Vaiśeṣika physics and metaphysics.

ಇನ್ನು ಮಧ್ವ ರಾಮಾನುಜರನ್ನು ‘ಪ್ರಚ್ಛನ್ನ ತಾರ್ಕಿಕ’ ಎಂಬ ಅಭಿಪ್ರಾಯವೂ ಕಾಣಬಹುದಾಗಿದೆ:


ಮುಂದಿನ ಪುಟ ನೋಡಿ:

Dr.B.N.K.Sharma, in an article, referring to Madhva being charged as a 'Sophist': He has cited one reference as //One opinion is by Dr.S.Radhakrishnan (Indian Philosophy Vol.2.p.258).//


*An Attack on Śrī Madhvācārya in the Saura Purāṇa* 71

to do with either. Ignorance of the exact state of philosophical and polemical atmosphere during and before the times of Madhva as well as a failure to realise the magnitude of Madhva's mission are alone responsible for the wild criticism urged in certain quarters that Madhva was a friend of the Naiyāyikas, or the other one urged by the Pandit-interpolator in the *Saura Purāṇa* that he was a Sophist ( हैतुक )[1] and above all for the sapient comment emanating from a recent writer on Indian Philosophy that " Madhva makes a *clever* use of the Nyāya-Vaiśeṣika doctrines."[2] ( Italics mine ).

In the English introduction to the Hindi translation of the 'Sarvadarshana Sangraha' of Madhavacharya, the author has said that Ramanuja and Madhva are called 'Pracchanna Tarkika-s'. See image:


Of the āstika systems the Rāmānuja philosophy of Qualified Monism ( Viśiṣṭādvaita ) belongs to tārkika class because it is based on inference supported by argument rather than on Scripture ( Śruti ). The same is the case with the Mādhva system ( called Pūrṇaprajña in the present work ). But their difference is that while Madhva directly insists on the theory of difference ( *bheda* ) maintaining Dualism, Rāmānuja, though accepting difference at least in treatment, does not stick to it and explains it in terms of qualification of the Supreme Self or Brahman. This tendency of hiding himself is reproachable and that is why he is placed before Madhva. These two Vaiṣṇava systems, they say, are hidden or indirect rationalists ( pracchanna-tārkika ).

n another Sanskrit book, on the various Darshanas, on p.2, the author, in the Bhumikaa, says "Ramanuja and Madhva are Pracchanna Tarkikas':
http://14.139.116.20:8080/jspui/bitstream/10603/181894/3/03_chapter%201.pdf See image:

ಮುಂದಿನ ಪುಟ ನೋಡಿ:

दर्शनकारा द्विविधा नास्तिका आस्तिकाश्च । नास्तिका द्विविधा आध्यक्षिकास्ता-किकाश्च । आध्यक्षिकश्चार्वाकाः (1) नास्तिकास्तार्किका द्विविधाः क्षणिकवादिनः स्याद्वादिनश्च क्षणिकवादिनो बौद्धाः (2) स्याद्वादिनो जैनाः (3) । आस्तिका द्विविधाः सगुणात्मवादिनो निर्गुणात्मवादिनश्च । सगुणात्मवादिनो द्विविधास्तार्किकाः श्रौताश्च । तार्किका द्विविधाः प्रच्छन्नतार्किकाः स्पष्टतार्किकाश्च । प्रच्छन्नतार्किका द्विविधाः प्रच्छन्नद्वैताः स्पष्टद्वैताश्च । प्रच्छन्नद्वैता रामानुजीयाः (4) । स्पष्टद्वैता माध्वाः (5) । स्पष्टतार्किका

Subrahmanian Vaidyanathan

https://gaudiyadiscussions.gaudiya.com/topic_2133.html Gaudiyas' discussion: //I see a design of God here. The mAyAvAdIs had devised such wild theories to support their stand, there was a dire need for an "equal and opposing force". As I see it, these Maadhvas have been invested by Krishna Himself with His own power to debate endlessly. Its a God given gift. They are born to think like that. It is not without reason that they are called "pracchanna tarkika" i.e. disguised logicians (as a pejorative like pracchnna bauddha - disguised buddhists for the mAyAvAdIs)//

ಹಿಂದಿನ ಕಾಲದ ವಿದ್ವಾಂಸರಾದ ಮ.ಮ.ಶ್ರೀ ಪೋಲಗಂ ರಾಮ ಶಾಸ್ತ್ರಿಗಳು ಮತಗಳಲ್ಲಿರುವ ಸಾಮ್ಯಗಳನ್ನು ಪಟ್ಟಿ ಮಾಡಿದ್ದಾರೆ: (Chaturmata Saara sangrahah of Srimat Appayya Dikshitendra): ಇದರಲ್ಲಿ ಅದ್ವೈತ, ಶ್ರೀಕಂಠರ ಶಿವಾದ್ವೈತ (ಶಿವ-ವಿಶಿಷ್ಟಾದ್ವೈತ), ರಾಮಾನುಜ ಮತ್ತು ಮಧ್ವ ಮತಗಳು 'ಚತುರ್ಮತಗಳು'. ಮುಂದಿನ ಪುಟ ನೋಡಿ:

## ( ६ ) चतुर्मतानां समान्यतस्सामरस्यम् ।

मुक्तिसौधारोहणसाधनीभूतनिश्रेणिकाचरमपर्वरूपाणाञ्चोपनिषदां तात्पर्यनिर्णायकब्रह्मसूत्रविवरणरूपत्वेन च मतान्तरेभ्यः मध्वादिमतत्रयं भगवत्पादमतप्रत्यासन्नम् । तत्प्रत्यासत्तौ हेत्वन्तराण्यपि प्रदर्श्यन्ते -

(१) स्वभाववादनिरासेन कार्यकारणभावाभ्युपगमः (२)चार्वाकमतनिरासेन शरीरेन्द्रियाद्यतिरिक्तात्माभ्युपगमः, (३) प्रत्यक्षातिरिक्तप्रमाणाभ्युपगमः· (४) वेदप्रामाण्यस्वीकारः (५) शरीरपरिमाणात्माभ्युपगन्तृजैनमतनिरासः (६) क्षणिकविज्ञानात्म-वादशून्यवादसर्वपदार्थक्षणिकत्वतुच्छत्वाभ्युपगन्तृबौद्धवादनिरासः (७)वर्णाश्रमादिव्यवस्थास्वीकारः (८) नरकस्वर्गाद्यभ्युपगमः (९)प्रामाणानां परतः प्रामाणस्य नैयायिकाद्यभ्युपगतस्य, स्वतोऽप्रामाण्यस्य च बौद्धाभ्युपगतस्य निरासेन स्वतःप्रामाण्याभ्युपगमः (१०) तार्किकाद्यभ्युपगतस्य असत्कार्यवादस्य निरासेन सत्कार्यवादस्थिरीकारः (११) ईश्वरानभ्युपगन्तृजैमिनिकपिलदर्शन-नास्तिकदर्शननिरासेन ईश्रवस्थापनम् (१२) अनुमानावष्टंभेन जगन्मूलकारणाभ्युपगन्तृतार्किकसांख्यादिनिरासेन श्रुत्यवष्टंभेनैव तदभ्युपगमः (१३) ईश्वरस्य ऐश्वर्यवर्णनेऽपि स्पष्टं जगत्कारणत्व स्यावर्णयितृणां योगिनां मतनिरासेन ईश्वरजगत्कारणत्ववर्णनम् ।

(१४) ईश्वरस्य जगत्सर्जने कर्मानपेक्षत्ववादिपाशुपतदर्शन-निरासेन कर्म सापेक्षत्ववर्णनम् (१५) ईश्वरस्य निर्दोषानन्तकल्याण-गुणाकरत्वसशरीरत्ववर्णनम् (१६) ईश्वरस्य जीवं प्रति कारयितृत्वस्य

कर्मफलदत्वस्य चाभ्युपगमः (१७) सृष्टिप्रलयाद्यभ्युपगमः (१८)संसारानादित्वस्वीकारः (१९) कर्मभक्तिज्ञानयोगाभ्युपगमः (२०) एक एवेश्वर इत्यपगमः (२१) सगुणेश्वरोपासनया तदीयलोकविशेषप्राप्तिरूपस्य मोक्षस्याभ्युपगमः (२२) तस्मिंश्च मोक्षे जीवस्य जगद्व्यापारवर्जं ईश्वरेण साकं भोगमात्रसाम्याभ्युपगमः (२३)ईश्वरस्य जीवस्य च भेदाभ्युपगमः (२४ ) जगतः वैकुण्ठादिलोकस्य च सत्यत्वाभ्युपगमः (२५) जीवस्य जगत्कारणत्वानभ्युपगमः (२६) मोक्षे दुखनिवृत्ति-मात्राभ्युपगन्तृतार्किकादिमतनिरासेन सुखस्याप्यभ्युपगमः ।

२७) भगवदपरोक्षज्ञानान्मोक्षस्वीकारः (२८) जीवस्य मोक्षे स्वरूपानन्दब्रह्मानन्दानुभववर्णनम् (२९) कर्मणा मोक्षास्वीकारः (३०)ज्ञानकर्मसमुच्चयवादनिरासः (३२) भगवच्छरणागतिस्वीकारः (३२) जीवस्य जडत्वस्वीकर्तुः तार्किकादेः जडबोधात्मकत्वाभ्युपगन्तुः भाट्टस्य च निरासेन केवलचिद्रूपत्वाभ्युपगमः (३३) जीवस्यानुमेयत्वपरप्रकाश्यत्वाभ्युपगमनिरासेन प्रत्यक्षत्व - स्वयंप्रकाशत्वाभ्युपगमः (३४) जीवस्यानन्दरूपत्वाभ्युपगमः (३५)जीवस्य केवलभोक्तृत्वाभ्युपगन्तृसांख्यप्रतिक्षेपेण कर्तृभोक्तृरूप - त्वाभ्युपगमः (३६) जगतः प्रकृतिपरिणामत्वाभ्युपगमेन आरंभवादसंघातावाद निरासः (३७) कार्यकारणात्यन्तभेदवादितार्किक-मतनिरासेन कार्यकारणानन्यत्वाभ्युपगमः (३८) स्फोटवादिवैयाकरण-मतनिरासः (३९) ऐकभविकत्रादानभ्युपगमः ।

(४०) जीवजगद्ब्रह्मणां पारमार्थिकभेदाभेदवादिभास्करादिमत प्रतिक्षेपः (४१) ब्रह्मणस्सावयवत्वपरिणामित्वाद्युपगन्तृमतनिरासः (४२) पदानां कार्यव्युत्पत्तिनियमाभ्युपगन्तृप्राभाकरमतप्रतिक्षेपेण

सिद्धेऽप्यर्थे वेदप्रामाण्याभ्युपगमः (४३) प्रकृतेः स्वातन्त्र्याभ्युपगन्तृ सांख्यप्रतिक्षेपेण प्रकृतेरीश्वरपारतन्त्र्याभ्युपगमः (४४)यागीयपशुहिंसाया अदोषत्वाभ्युपगमः (४५)व्यावहारिकप्रपञ्चस्य स्वाप्नवैधर्म्याभ्युपगमः (४६) जीवोत्पत्तिनिरासः (४७) मुक्तौ जीवस्य स्वरूपाविर्भाववर्णनम् (४८) पाञ्चरात्रस्य सर्वथा अप्रामाण्यानभ्युपगमेन प्रामाण्यस्वीकारः (४९) परमात्मनस्सर्ववेदप्रतिपाद्यत्वाभ्युपगमः (५०)विष्णोः ब्रह्मकोट्यन्तर्भावस्वीकारः (५१) तार्किकाभ्युपगतसगत्रायप्रतिक्षेपः, इत्येवमादिभिः बहुभिः मतचतुष्टयसाधाणैरंशैः इतरमतापेक्षया मध्वादिमतचतुष्टयं सामान्यतः मिथस्समरसं सन्निकृष्टं च दरीदृश्यते ।

## (७) मध्वभगवत्पादमतयोस्सामरस्यम् ।

अथ मतचतुष्टस्य विशेषतः प्रत्यासत्तिमुखेन सामरस्यं प्रदर्शयामः । तत्र प्रथमतः द्वैतमतस्य अद्वैतमतस्य च विशिष्य प्रत्यासत्तिं सामरस्यं च प्रदर्शयामः - (१) आत्मनि दुःखित्वाद्यनुभवो न प्रमा, किंतु दुःखभयादेरन्तःकरणनिष्ठस्य आत्मन्यध्यासात् भ्रमरूप एव, इत्यद्वैतमत इव द्वैतमतेऽप्यभ्युपेयते, इत्युभयोर्मतयोस्सामरस्यम् ।इयांस्तु विशेषः - यत् द्वैतमते बुद्धीन्द्रियशरीरविषयाः स्वरूपतस्सन्त एव अविद्यादिवशात् आत्मीयतया अध्यस्यन्ते, अद्वैतमते तु दुःखादिकं स्वरूपेणापि मिथ्या, इति ।(२) तथा ब्रह्मण जीवव्यावर्तकस्वभिन्न-धर्मराहित्यरूपं निर्धर्मकत्वं द्वैताद्वैतोभय- मतसाधारणम् ।इयान् विशेषः - यत् द्वैतमते ब्रह्मणि आनन्दादेः भेदाभावेऽपि धर्मधर्मिभावनिर्वाहाय भेदप्रतिनिधिर्विशेषोऽङ्गीक्रियते । अद्वैतमते तु अविद्यावशात् कल्पितभेदेन धर्मधर्मिभावः, इति ।

(३) एवं मतद्वयेऽपि शारीरकशास्त्रे विचार्यस्य मुमुक्षुज्ञेयब्रह्मणः

नोपास्यत्वं, अपि तु तत्प्रतिबिंबस्यैवोपास्यत्वम् । (४) मतद्वयेऽपि जीवस्य ब्रह्मप्रतिबिंबत्वम् । इयान् विशेषः - यत् द्वैतमते बिंबात् प्रतिबिंबो वस्तुतो भिन्नः, अद्वैतमते काल्पनिकस्तयोर्भेदः इति। (५)जीवस्य संसारदशायां स्वरूपानन्दब्रह्मस्वरूपतदानन्दाद्यावारकं अनादिभावरूपमज्ञानं मायाऽविद्याप्रकृत्यादिशब्दवाच्यं ज्ञाननिवर्त्यं मतद्वयेऽपि अभ्युपेयते ।द्वैतमते तत् सत्यं अद्वैतमते अनिर्वचनीयमिति विशेषः। (६) द्वैतमतेऽपि अद्वैतमतवत् मुक्तौ जीवस्य ब्रह्मानन्दानुभव इष्यते ।एतत् जीवब्रह्माभेदसूचकम् । भेदे हि अन्यानन्दस्य अन्यं प्रति अपुरुषार्थत्वं स्यात् । अन्यानन्दस्य अन्यं प्रति परोक्षत्वमेव च स्यात् नापरोक्षत्वम् ।

(७) द्वैतमतेऽपि जन्यज्ञानं मनोनिष्ठमङ्गीकृतम् । अद्वैमतेऽपि वृत्तिरूपज्ञानं मनोनिष्ठमिष्यते । इति उभयमतसामरस्यम् । ज्ञानेच्छाकृतित्रितयं मनोनिष्ठं आत्मनिष्ठं च इति द्विविधमिष्टं मध्वमते, इति विशेषः । (८) विष्णोर्ब्रह्मत्वं तदुपासनाङ्गीकरणं च मतद्वयेऽपि समानम्, (९) शिखा यज्ञोपवीतत्यागरूपपारमहंस्याश्रमस्वीकारः मतद्वये तुल्यः। (१०) शुक्तिरूप्यादेः सद्वैलक्षण्यं मतद्वयसंमतम् । एवं सूक्ष्मेक्षिकया गवेषणे द्वैताद्वैतमतयोः विशिष्य अन्येऽपि सामरस्यप्रकाराः उपलभ्येरन् ।

## ( ८ ) रामानुजभगवत्पादमतयोस्सामरस्यम् ।

अथ रामानुजीयविशिष्टाद्वैतमतस्य अद्वैतमतस्य च विशिष्य प्रत्यासत्तिं सामरस्यं च प्रदर्शयामः - (१) रामानुजमतेऽपि द्वैतमत इव मुक्तौ जीवस्य ब्रह्मानन्दानुभव इष्यते, एतत् अद्वैतमतसंमतजीवब्रह्माभेदसूचकं पूर्ववर्णितरीत्या इति इदमेकं सामरस्यम् (२) बाह्यप्रकाशनिवर्त्यं बाह्यं तमः भावरूपं रामानुजमते

उपगम्यते, तद्दृष्टान्तेन आन्तरज्ञानप्रकाशनिवर्त्यं आन्तरतमोरूपमज्ञानं भावरूपं अद्वैत्यभिमतं साधयितुं शक्यते, इति दृष्टान्तांशे मतद्वयसामरस्यम् । (३) रामानुजमते द्वैतमतादयं विशेषः - यत् जगतः ब्रह्मरूपाभिन्ननिमित्तोपादानकत्वाङ्गीकरणं अद्वैतमत इव । इदमपि मतद्वयसामरस्यम् । (४) रामानुजमते कथंचित् विशिष्टरूपेणापि अद्वैतं वर्णितम् । न तु केवलं द्वैतं द्वैतमत इव । इदमपरं सामरस्यम् । (५) मुक्तौ तारतम्यं नास्तीति भगवत्पादमत इव रामानुजमतेऽपि इष्यते । इदमपि सामरस्यम् । परं तु अद्वैतमते परममुक्तौ तारतम्याभावः । रामानुजमते अद्वैतिभिरपरमुक्तितया अभ्युपगते स्वयं परममुक्तितया अभ्युपगते मोक्षे तारतम्याभावः इति विशेषः । (६)विष्णोर्ब्रह्मत्वाङ्गीकारः विष्णूपासनाङ्गीकारः वैकुण्ठलोकस्थ-तत्प्राप्त्यङ्गीकारश्च मतद्वयसंमतः इति सामरस्यम् । (७) शुक्तिरूप्यादेः असद्वैलक्षण्याङ्गीकारः मतद्वयेऽपि समः । (८) ज्ञानयोगस्य कैवल्यरूपमोक्षप्रापकत्वमुभयसंमतम् । भक्तियोगस्य च वैकुण्ठलोके भगवता सह भोगमात्रसाम्यरूपमोक्षप्रापकत्वं उभयसंमतम् । इयान् विशेषः - यत् अद्वैतमते ज्ञानयोगप्राप्यं कैवल्यमेव परममुक्तिः । भक्तियोगप्राप्यः वैकुण्ठदिरूपब्रह्मलोके ब्रह्मणा सह भोगमात्रसाम्यरूपमोक्षस्तु अपरमोक्ष इति इष्यते । रामानुजमते तु एतद्वैपरीत्यम् । रामानुजमते हि परिशुद्धजीवात्मभावनारूपज्ञानयोगेन केवलाचिदनुभवरूपैश्वर्यशब्दितभोगापेक्षया उत्तमः, चिदचिद्विशिष्ट-नारायणाख्यब्रह्मात्मकपत्यनुभवरूपपरमपदशब्दितपरममुक्त्यपेक्षया अवमः, पतिपरित्यक्तपत्न्याः वसनभूषणाद्यलंकृतस्वीय-शरीरमात्रानुभवतुल्यः बन्धाद्विलक्षणः मुक्तिभिन्नश्च आन्तरालिकः अक्षरगतिशब्दितः कैवल्याख्याविख्यातः केवलचिदनुभवः पाप्यते । इयमवस्था बन्धमोक्षभिन्ना अथ वा अपरमोक्षरूपा इति इष्यते । ब्रह्मणा सह भोगसाम्यमेव भक्तियोगप्राप्यं परममोक्ष इष्यते । इत्थं मतद्वयस्यापि

सामरस्यमस्ति । एवमन्येऽपि सामरस्यप्रकाराः सूक्ष्मेक्षिकया अवगन्तव्याः ।

## ( ९ ) श्रीकण्ठभगवत्पादमतयोस्सामरस्यम् ।

अथ श्रीकण्ठाचार्यसंबन्धिशिवाद्वैतमतस्य अद्वैतमतस्य च विशिष्य प्रत्यासत्तिं सामरस्यं च प्रदर्शयामः -

यद्यपि श्रीकण्ठमते प्रायशः रामानुजमतवदेव स्थूलचिदचिद्वस्तुविशिष्टं ब्रह्म कार्यं सूक्ष्मचिदचिद्वस्तुविशिष्टं ब्रह्म कारणमिति कार्यकारणोभयावस्थब्रह्मणः विशिष्टाद्वैतरूपत्वं, ब्रह्मप्रपञ्चयोः शरीरशरीरिभावः, ब्रह्मणः सविशेषत्वं, प्रपञ्चसत्यत्वं, जीवाणुत्वं, अर्चिरादिना मार्गेण लोकान्तरस्थपरब्रह्मप्राप्तिपूर्वकतत्सादृश्यावाप्ति-रूपमुक्तिरित्यादिप्रमेयनिरूपणं कृतं, तथापि रामानुजमतात् श्रीकण्ठमते अद्वैतमतप्रत्यासत्त्यतिशयगमको विशेषो वर्तते ।

तथा हि- रामानुजमते हि प्रकृतिरूपा जडशक्तिरेव चिदचिद्रूपप्रपञ्चात्मना परिणमते, न तु ब्रह्मणः धर्मज्ञानरूपा चिच्छक्तिः तथा परिणमते । सा च ब्रह्मणश्चिच्छक्तिः ब्रह्मणस्सकाशात् भिन्ना ब्रह्मणो गुणगणात्मिका च । ब्रह्मतदीयचिच्छक्तिभ्यां भिन्ना जडभिन्ना च शुद्धसत्त्वशब्दिता नित्यविभूतिः ब्रह्मणः अनन्तविष्वक्सेनगरुडादीनां नित्यानां मुक्तानाञ्च भोग्यभोगोपकरणभोगस्थानशरीरादिरूप-विविधपदार्थाकारा भवति । ब्रह्ममहिषी महालक्ष्मीस्तु ब्रह्मतदीयचिच्छक्तिनित्यविभूतिभ्यो भिन्ना स्वतन्त्रचेतनान्तररूपा जीवकोट्यन्तर्गता, तथापि विभुत्वादणुस्वरूपजीवान्तरविलक्षणा, अथ वा विभुत्वादीश्वरपारतन्त्र्याच्च पतिपुत्रव्यावृतपत्नीन्यायेन जीवेश्वरविलक्षणा, अथ वा नित्यलीलाख्यविभूतिद्वयशेषित्वादिमात्रेण भगवत्तुल्यत्वात् ईश्वरकोट्यन्तर्गता स्वस्वेतरसर्वशेषिभगवच्छेषभूता

जगत्कारणत्वादि- ब्रह्मलक्षणशून्या च । महालक्ष्म्याः ब्रह्मशक्तित्वादिवादाः पत्नीत्वादिरूपेण ब्रह्मविशेषणत्वाभिप्रायाः । न तु महालक्ष्म्याः ब्रह्मत्वं वा तच्छक्तिरूपत्वं वा, इत्यभ्युपगम्यते ।

श्रीकण्ठमते तु न तथाभ्युपगम्यते । किं तु सकलजगत्कर्तुः परमेश्वरस्य धर्मज्ञानरूपा चिच्छक्तिरेव केनचिदंशेन प्रथमं नारायणात्मना परिणता सती तद्द्वारा पश्चात् चिदचिद्रूपप्रपञ्चात्मना परिणमते । अत एव नारायणस्योपादानत्वव्यवहारः श्रुतिषु । अचित्प्रपञ्चस्य स्वरूपान्यथाभावरूपा उत्पत्तिः, चित्प्रपञ्चस्य तु नारायणांशभूतस्य धर्मज्ञानसंकोचविकासरूपैव उत्पत्तिः न तु स्वरूपान्यथाभावः, चित्प्रपञ्चस्य मुक्तिभाक्त्वेन नित्यत्वात् । सा चिच्छक्तिरेव परब्रह्मणश्शिवस्य ज्ञानेच्छाकृतिबलतेजःप्रभृतिगुणरूपेण, शरीरेन्द्रियमनः प्राणरूपेण, विविधभोग्यभोगस्थानभोगोपकरणरूपेण सह भोक्तुः दिव्यमहिषीरूपेण च परमेश्वरमासेवते । स्वयमपि ज्ञानेच्छादि- रूपैरुक्तैस्सर्वैरप्युपेता नारायणाख्यपुरुषरूपेण दिव्यमहिषीयुक्ता च भवति । उक्तं चाभियुक्तैः -

'शक्तिश्शरीरमधिदैवतमन्तरात्मा ज्ञानं क्रिया करणमासनजालमिच्छा ।
ऐश्वर्यमावरणमायतनानि च त्वं किं तत्र यद्भवसि देवि शशाङ्कमौलेः' ॥

'योऽयं चकास्ति गगनार्णवरत्नमिन्दुः योऽयं सुरासुरगुरुः पुरुषः पुराणः ।
यद्वाममर्धमिदमन्तकसूदनस्य देवि त्वमेव तदिति प्रतिपादयन्ति' ॥

'एकैव शक्तिः परमेश्वरस्य भिन्ना चतुर्धा विनियोगकाले ।
भोगे भवानी पुरुषेषु विष्णुः कोपे तु काली समरे च दुर्गा ॥' इति ।

श्रीमदप्पयदीक्षितैश्च शैवचिच्छक्तिनिरूपणपरे आनन्दलहरीग्रन्थे सर्वमिदमुक्तम् ।

'शंभोर्ज्ञानक्रियेच्छाबलकरणमनश्शान्तितेजश्शरीर -

स्वर्लोकागारदिव्यासनवरमहिषीभोग्यवर्गादिरूपा ।
सर्वैरेतैरुपेता स्वयमपि च परब्रह्मणस्तस्य शक्तिः
सर्वाश्चर्यैकभूमिः मुनिभिरभिनुता वेदतन्त्राभियुक्तैः ॥' इति ।

तैरेव हरिहरगौरीरूपरत्नत्रयनिरूपिकायां तत्त्रयपरीक्षायामप्युक्तम् -- 'धर्मः पुंरूपमाप्त्वा सकलजगदुपादानभावं बिभर्ति' इति, 'यश्चोपादानभूतः पर इह पुरुषः सैष नारायणोक्त्या ख्यातः' इति, 'तस्यैवाद्यस्य पुंसः परिणतिरखिलोऽप्यम्बरादिर्विकारः तस्यैवांशो विरिञ्चावधिरिह सकलोऽप्येष संसारिवर्गः' इति च ।

ब्रह्मणश्च सकलजगत्कृर्तभूतस्य निर्विकारत्वश्रुतिविरोधेन न साक्षादुपादानत्वम् । अपि तु स्वापृथक्सिद्धचिच्छक्तितदंशनारायण-द्वारकमित्यभ्युपगम्यते । एवं चिदचिद्रूपप्रपञ्चपरिणामित्वेन चिचिद्रूपप्रपञ्चाभिन्नतया उक्ता च चिच्छक्तिः ब्रह्माभिन्नत्वेनापि श्रीकण्ठाचार्यैः भाष्ये बहुस्थलेषु उद्घोषिता । नैतदौपचारिकतया नयनमर्हति । तात्पर्येण पौनःपुन्येन ब्रह्मचिच्छक्त्योरभेदस्य तत्र वर्णनात् ।

इत्थं रामानुजमतापेक्षया महतो विशेषस्य अद्वैतमतप्रत्या-सत्त्यतिशयगमकस्य श्रिकण्ठमते विद्यमानत्वादेव, निरुक्त-विशेषमवलम्ब्यैव श्रीमद्दीक्षितेन्द्रैः शिवाद्वैतनिर्णयाख्यग्रन्थे - (१)'ब्रह्मचिच्छक्तेः सकलचेतनाचेतनप्रपञ्चाकारत्वं, (२) तस्या एव ब्रह्मस्वरूपत्वं, (३) तदीयसकलगुणगणरूपत्वं, (४) ब्रह्मणो निर्विकारत्वमित्यर्थचतुष्टयं श्रीकण्ठाचार्यैरभ्युपगतं, निर्गुणं निष्प्रपञ्चं जीवाभिन्नं शुद्धाद्वैतरूपं ब्रह्मेति तेषां परमसिद्धान्तः इत्यमुमर्थं दृढमवगमयत्येव । तथा हि, चिच्छक्तेः ब्रह्माभेदे तस्या एव तदीयसकलगुणगणात्मत्वे च ब्रह्मणः स्वभिन्ना गुणा न सन्ति, किं तु स्वयमेव कल्पितभेदेन गुणवदप्यवभासते, वस्तुतो निर्गुणमेव ब्रह्म

इत्येतत् तावत्सिद्ध्यति । न ह्यभेदे मुख्यो गुणगुणिभावः उपपद्यते, न चाभेद इव मुख्यगुणगुणिभावोपपादको भेदोऽपि आचार्यैरङ्गीकृत इति वक्तुं शक्यते, आरम्भणाधिकरणभाष्यादिषु विरोधेन भेदाभेदपक्षस्य प्रतिक्षिप्तत्वात् । न च मध्वमत इव आचार्याणां मते गुणगुणिनोर्भेदाभावेऽपि भेदप्रतिनिधिर्विशेषोऽभ्युपगतोऽस्ति । तस्मात् गुणविषये तावत् 'अपृथक्त्वेऽपि चैतन्यात् पृथगिवावभासन्ते' इति पञ्चपादिकोक्तपक्ष एवाभिमत इत्येतत् सुदृढमेव ।

तथा सकलप्रपञ्चाकारायाः चिच्छक्तेः ब्रह्माभेदाभ्युपगमेन वियदादिप्रपञ्चः तद्विवर्त इति सिद्ध्यति । अन्यथा वियदादेरनित्यस्य तत्परिणामत्वाभ्युपगमे तदभिन्नस्य ब्रह्मणः निर्विकारत्वाभ्यु-पगमविरोधापत्तेः । तस्मात् संक्षेपशारीरकोक्तरीत्या भाष्ये परिणामवादावलम्बनं व्यवहारदृष्टौ कर्मोपासनादिनिर्वाहार्थं तत्वदृष्टौ तत्प्रतिषेधापेक्षिततत्प्रसक्त्यर्थं चेति ब्रह्मणो निष्प्रपञ्चत्वपक्ष एवाभिमतः इत्यपि सुदृढम् ।

ब्रह्माभिन्नायाः चिच्छक्तेः सकलाचेतनप्रपञ्चाकारत्ववत् सकलचेतनप्रपञ्चाकारत्वस्याप्युक्तत्वेऽपि, चेतनप्रपञ्चस्य वियदादिवत् तद्विवर्तत्वं न सिद्ध्यति । तथा सति तस्य तत्वज्ञानान्निवृत्त्या मुक्तिफलभाक्त्वाभावप्रसङ्गात् । नित्यस्य तस्य ब्रह्माभेदेऽपि ब्रह्मनिर्विकारत्वविरोधाप्रसङ्गाच्च । तस्मात् निर्गुणं निष्प्रपञ्चं जीवाभिन्नं शुद्धाद्वैतरूपं ब्रह्मेति आचार्याणामभिमतमित्येतत् सुदृढमेव' इत्यादिग्रन्थेन श्रीकण्ठमतस्याद्वैततात्पर्यकत्वमप्याविष्कृतम् ।

(५) एवमेव सन् घटः इत्यादिप्रत्यक्षस्य मतान्तर इव प्रपञ्चगतसत्यत्वविषयकत्वमनभ्युपगम्योपादानभूतसद्रूपब्रह्मतादात्म्यविषयकत्वं श्रीकण्ठाचार्याभ्युपगतं प्रपञ्चमिथ्यात्ववाद्यद्वैतिनामनुकूलम् । (६) एवं

घटः स्फुरतीत्यादिजीवधीष्वनुभूयमानस्य स्फुरणस्य ब्रह्मस्फुरणरूपत्वम्, (७) अहं सुखीति जीवैरनुभूयमानस्य सुखस्य ब्रह्मानन्दरूप-परशक्त्यंशत्वञ्च श्रीकण्ठाचार्याभ्युपगतमर्थात् जीवब्रह्माभेदसूचकं सत् अद्वैतिनामनुकूलम् । जीवब्रह्मणोर्भेदे अन्यज्ञानेन अन्येषां स्फुरणवत्त्वस्य अन्यानन्देन अन्येषां सुखित्वस्य चायोगात् ।

(८) एवं ''अनियमस्सर्वेषामविरोधः शब्दानुमानाभ्याम् '' इत्यधिकरणे प्रथमं ब्रह्मोपासनासामान्येऽर्चिरादिगतिं व्यवस्थाप्यानन्तरं ''केचिदाहुरनियमस्सर्वेषामुपासकानामर्चिरादिगतौ नियमाभावः, तथा सति श्रुतिस्मृतिभ्यामविरोधः इति '' इति मतान्तरमुपन्यस्य 'तत्रापि न दोषः निरन्वयोपासकानां तदपेक्षाभावात् ' इति तस्यापि सौत्रयोजनान्तरस्य अद्वैतिसम्मतस्य अदुष्टत्वमुपपादितम् । तथा 'तदाऽऽपीतेः संसारव्यपदेशात्' इत्यधिकरणावसाने, 'केचिन्निरन्वयोपासकानामिह शरीरपात एव मुक्तिरिति अर्चिरादिगतिमनियतामाहुः' इत्युपन्यस्तम् । एवं 'अर्चिरादिना तत्प्रथिते' रित्यधिकणावसानेऽपि ''निरन्वयोपासकानां नार्चिरादिगतिरिति केचित्' इति कथितम् । एवं यत्र यत्र अधिकरणे ब्रह्मविदः गतेरुत्क्रान्तेर्वा व्यवस्थापनं क्रियते तत्र सर्वत्रापि तस्य तस्याधिकरणस्य सकलब्रह्मवित्साधारण्यशङ्कापरिहारार्थमस्य मतस्योपन्यासात्, अनियमाधिकरणे स्वयमपि अस्योपपादनाच्च, अद्वैत्यभिमतायां निर्गुणज्ञानिनामिहैव मुक्तौ श्रीकण्ठाचार्याणामभिमतिरवगम्यते । केचिदित्युपन्यासस्य स्वयमिदानीं सगुणविद्यानिरूपणनिष्ठ एव न तु भगवत्पादवत् निर्गुणविद्यानिरूपणनिष्ठ इति द्योतनार्थत्वमेव वक्तव्यं, न तु स्वानभिमतिद्योतनार्थत्वम् । स्वानभिमतौ तन्मतस्योपपादनायोगात् ।

(९) एवमुपासनस्य जीवब्रह्माभेदगोचरत्वोपवर्णनमप्य-

द्वैतिनाऽननुकूलम् । इदं च प्रमेयजातं श्रीमद्दीक्षितैरेव शिवाद्वैतनिर्णये आनन्दलहर्याञ्च स्फुटं प्रत्यपादि । आनन्दलहरीस्थौ च पूर्वोक्तविषयसंग्राहकौ श्लोकाविमौ ।

''उक्ता खल्वत्र मुक्तिः गतिमुपरि विना निर्गुणोपासकानां
जीवाभेदावलंबा सगुणपरशिवोपासनाप्यत्र भाष्ये ।
सत्ताप्रत्यक्षबुद्धेर्जगति च विषयो वर्णितस्सत्यतान्यः
शुद्धं ब्रह्माद्वितीयं मतमिति बहुधाऽऽविष्कृतं तावदेवम् ॥''

''चिच्छक्तिं ब्रह्मणो यत् सकलचिदचिदाकारशालिस्वरूपां
यत्तां तस्य स्वरूपं यदपि गुणगणं यच्च तन्निर्विकारम् ।
आचार्याः प्रोचुरेतैः दृढमधिगमितं निर्विशेषं तदिष्टं
जीवास्तेनैक्यभाजो वियदनिलमुखाः तद्विवर्ता इतीदम् ॥'' इति

(१०) भगवत्पादमत इव श्रीकण्ठमतेऽपि भावरूपाज्ञानं अभ्युपगम्यते । परं तु आणवमलनाम्ना तस्य श्रीकण्ठमते व्यवहारः । शिवार्कमणिदीपिकायां जिज्ञासाधिकरणे - 'संसारिणां सर्वविषयत्वयोग्यचिच्छक्तिरूपनित्यसिद्धज्ञानावरणभूताः मलद्रव्यशक्तिविशेषा एव तत्तद्विषयाज्ञानानि इति अज्ञानानामभावत्व-कथापि वृथैव' इत्युक्तम् । (११) जीवस्य ब्रह्मानन्दानुभवः जीवब्रह्माभेदगमकः श्रीकण्ठमतेऽपि इष्यते । (१२) ब्रह्मणः जगत् प्रति अभिन्ननिमित्तोपादानत्वाभ्युपगमः मतद्वयतुल्यः । (१३) श्रीकण्ठमतेऽपि अद्वैतं विशिष्टरूपेण कथंचित् समर्थ्यते । (१४) पूर्वोत्तरमीमांसयोः ऐकशास्त्र्यसमर्थने रामानुजस्येव श्रीकण्ठस्य नाग्रहः । प्रथमतः ऐकशास्त्र्यं समर्थयित्वा, 'अथ वा' इति पक्षान्तरे तदनङ्गीकारात् ऐकशास्त्र्यसमर्थनं प्रौढिवादेनेत्याशयाविष्कारात् । भगवत्पादमतेऽपि प्रौढ्या ऐकश्स्त्र्याभ्युपगमात् । व्यक्तमिदं परिमलादौ ।

शिवार्कमणिदीपिकायां श्रीकण्ठभाष्ये अथवेति पक्षान्तरारंभे, 'किं ऐकशास्त्र्योपपादनव्यसनेनेत्यरुचिं मनसि निधायाह - अथवेति' इत्येवावतारिका दत्ता ।

(१५) प्रथमसूत्रघटकातश्शब्दार्थविवरणावसरे श्रीकण्ठभाष्ये 'यतोऽधीतवेदेन धर्मो विचारितः, अतः तदनुष्ठानसंपन्नचित्तशुद्धिना तत्कालसंपन्नविवेकादिगुणसहकृतपरमभक्तिसंभावितेनानेन ब्रह्मापि निरतिशयनिश्श्रेयसकरं विचारणीयमिति' इत्यत्र शिवार्कमणिदीपिकारीत्या आदिशब्देन वैराग्यादेरुक्त्या साधनचतुष्टयसंपन्नस्य ब्रह्मविचाराधिकारित्वं भगवत्पादाभ्युपगतमादृतम्, अतोऽपि मतद्वयसामरस्यम् । शिवार्कमणिदीपिकापरामर्शे स्फुटीकृतमिदं भवेत् ।'शमदमाद्युपेतस्स्यात्' इत्यस्मिन्नपि सूत्रे स्फुटमिदम् । (१६) 'शास्त्रयोनित्वात्' इति सूत्रास्यार्थद्वयमपि भगवत्पादीयं श्रीकण्ठसंमतम् । इतरभाष्येषु अर्थद्वयं न वर्णितम् । अनेनापि मतद्वयप्रत्यासत्तिः ।

(१७) यागीयपशुहिंसायाः हिंसात्वमभ्युपगम्यैव अशुद्धत्वं निराकृतं श्रीकण्ठभाष्ये भगवत्पादमतवत् । न तु रामानुजमतवत् हिंसात्वमेवापलपितं श्रीकण्ठेन ।पशुहिंसाया अहिंसात्वमौपचारिकमेव न मुख्यं श्रीकण्ठमते । (१८) शिवोपासनाङ्गीकारः, शिवस्य ब्रह्मत्वाङ्गीकारः, गौर्या अपि ब्रह्मत्वाङ्गीकारश्च मतद्वयसमानः ।(१९) 'सन्ध्ये सृष्टिराह हि' इत्यधिकरणे शिवार्कमणिदीपिकायां श्रीमद्दीक्षितोक्तरीत्या श्रीकण्ठाचार्याणां मतान्तर इव स्वप्नदृश्यरथादीनां सत्यत्वमिथ्यात्वपक्षयोः अभिनिवेशं विना स्वप्नव्यवहारः न जीवसंकल्पकृतः किं तु परमेश्वरसंकल्पमात्राधीनः इत्येतावन्मात्रे अभिनिवेशोऽपि स्वप्नसत्यत्ववादिमतापेक्षया श्रीकण्ठमतस्य

स्वप्रमिथ्यात्ववाद्यद्वैतमतसंनिकृष्टतां सूचयति इत्यतोऽपि मतद्वयसामरस्यम् । एवमेव अस्मिन् मतद्वये अन्येऽपि सामरस्यप्रकारा ऊहनीयाः ।

## (१०) मतान्तरापेक्षया मध्वादिमतेषु विशेषः ।

इयता प्रबन्धेन च मध्वादिमतत्रयस्य भगवत्पादमतं प्रति सामान्यतो विशेषतश्च प्रत्यासन्नत्वमुपवर्णितम् । यद्यपि, मध्वादिमतेषु जीवस्याणुत्वं साधितं नैयायिकादिमते तु विभुत्वं साधितम्, भगवत्पादमतेऽपि जीवस्य ब्रह्माभिन्नत्वात् स्वभावतः विभुत्वमेवाङ्गीकृतम् । एवं नैयायिकमते भगवत्पादमत इव निर्विकल्पकज्ञानमङ्गीकृतं, रामानुजमते सविकल्पकविशेषरूपमेव प्रथमपिण्डज्ञानं निर्विकल्पकस्थानेऽभिषिक्तम् । एवमादिहेतुभिः नैयायिकादिमतानामपि मध्वादिमतत्रयापेक्षया भगवत्पादमतप्रत्यासत्तिः वक्तुं उचितेव आपाततो भाति , तथापि नैयायिकादिमतापेक्षया मध्वादिमते स्वतः प्रामाण्याभ्युपगमजीवचिदानन्दरूपत्वाभ्युपगममोक्ष-कालीनसुखाविर्भावाभ्युपगमसत्कार्यवादकार्यकारणानन्यत्वाभ्युपगम-प्रकृतिपरिणामवादश्रुत्यवष्टम्भेन मूलकारणव्यवस्थापनादिभिः पूर्वोक्तैः बहुभिरंशैः भगवत्पादमतप्रत्यासत्त्यतिशयस्य सत्वेन मध्वादिमतत्रयमेव भगवत्पादमतप्रत्यासन्नत्वेन दीक्षितचरणैर्वर्णितमित्यवगन्तव्यम् ।

यद्यपि साक्षात् ब्रह्मपरिणामित्ववादिनां प्राचीनवृत्तिकाराधुनिक-भास्करप्रभृतीनां मतं भेदाभेदगोचरं अद्वैतमतसंनिकृष्टमस्ति, तथापि श्रीकण्ठाचार्यस्य चिच्छक्तिद्वारकब्रह्मपरिणामवाद एव उक्तरीत्या विवर्तवादपर्यवसायी इतरमतापेक्षया अतिशयेन अद्वैतमतस्य संनिकृष्ट इति वृत्तिकारादिमतपरित्यागेन श्रीकण्ठमतमेव चतुर्मतमध्ये योजितमिति बोध्यम् ।

ಇಷ್ಟು ಶ್ರೀ ಪೋಲಗಂ ರಾಮ ಶಾಸ್ತ್ರಿಗಳ ಚತುರ್ಮತ ಸಾಮರಸ್ಯ ವಿಷಯ. ಇವರು ನಾಲ್ಕು ಮತಗಳಲ್ಲಿ 'ಸಾಮಾನ್ಯ ವಿಷಯಗಳು' ಎಂದು 51 ಪ್ರಮೇಯಗಳ ಪಟ್ಟಿ ಮಾಡಿದ್ದಾರೆ. ಇದು ಬಿಟ್ಟು ಅವಾಂತರವಾಗಿ ಇವೇ ಮತಗಳಲ್ಲಿ ಪರಸ್ಪರ ಕೆಲ ವಿಶಿಷ್ಟ ವಿಷಯಗಳನ್ನೂ ಸಂಗ್ರಹಿಸಿದ್ದಾರೆ. ಮುಂದುವರೆದು...

ಶಂಕರರು ತಮ್ಮ ಮಾಂಡೂಕ್ಯ ಗೌಡಪಾದ ಕಾರಿಕಾ 3.17 ಭಾಷ್ಯದಲ್ಲಿ कपिलकणादबुद्धार्हतादिदृष्ट्यनुसारिणो द्वैतिनो निश्चिताः ಸಾಂಖ್ಯ, ವೈಶೇಷಿಕ, ಬೌದ್ಧ, ಜೈನ ಮುಂತಾದವರನ್ನು ಎಲ್ಲರನ್ನೂ 'ದ್ವೈತಿಗಳು' ಎಂದು ಕರೆದಿದ್ದಾರೆ. ಅವರು ಸೂತ್ರ ಭಾಷ್ಯದಲ್ಲಿ ವಿಮರ್ಶೆ ಮಾಡಿ ವೇದಾಂತ ಮತವಲ್ಲದವರೆಂದು ತಿಳಿಸಿದ್ದು: ಸಾಂಖ್ಯ, ಪಾತಂಜಲ ಯೋಗ, ನ್ಯಾಯ-ವೈಶೇಷಿಕ, ಪೂರ್ವ ಮೀಮಾಂಸಾ, ಚಾರ್ವಾಕ, ಪಾಶುಪತ, ಪಾಂಚರಾತ್ರ, ಬೌದ್ಧ, ಜೈನ. ಈ ಎಲ್ಲ ಮತಗಳಲ್ಲೂ ಇರುವ ಸಮಾನ ಅಂಶಗಳು: ಜೀವ ನಾನಾತ್ವ (ಜೀವ-ಜೀವ ಭೇದ) ಮತ್ತು ಪ್ರಪಂಚ ಸತ್ಯತ್ವ (ಬೌದ್ಧರಲ್ಲಿ ಸೌತ್ರಾಂತಿಕ ಮತ್ತು ವೈಭಾಷಿಕರು ಪ್ರಪಂಚವನ್ನು ಸತ್ಯವೆಂದು ಒಪ್ಪುವರು). ಈ ಎರಡು ಪ್ರಮುಖ ಪ್ರಮೇಯಗಳು ಮಧ್ವ ರಾಮಾನುಜ ಮತಗಳಲ್ಲೂ ಇವೆ. ಆ ಕಾರಣಕ್ಕೆ ಮಧ್ವ ರಾಮಾನುಜ ಮತಗಳು ಚಾರ್ವಾಕಾದಿ ಅನೇಕ ಮತಗಳ ಪ್ರಚ್ಛನ್ನ ರೂಪ ಎಂದು ಹೇಳಲು ಅವಕಾಶವಿದೆ. ಆದರೆ ಈ ರೀತಿಯಾದ ಗಣನೆ ಸರಿಯೆಂದು ಮಧ್ವ ರಾಮಾನುಜ ಮತೀಯರು ಒಪ್ಪುವರಾ? ಇದೇ ದೋಷವೇ ಅದ್ವೈತ-ಬೌದ್ಧ ಸಾಮ್ಯ ಹೇಳುವವರ ಮೇಲೂ ಅನಿವಾರ್ಯವಾಗಿ ಬರುತ್ತೆ. ಇದು ಮೇಲೆ ಕಾಣಿಸಿದ 'ಮತಗಳಲ್ಲಿ ಪ್ರಮೇಯಗಳ ಸಾಮ್ಯತೆ/ಸಾಂಕರ್ಯ ಇರುವುದನ್ನು ತಪ್ಪಿಸಲು ಸಾಧ್ಯವಿಲ್ಲ' ಎಂಬ ಸತ್ಯವನ್ನು ದೃಢಪಡಿಸುತ್ತೆಯಷ್ಟೆ. ಪ್ರಾಜ್ಞರು ಮಾತ್ರವೇ ಈ ಸತ್ಯವನ್ನು ಮನಗಾಣುವರು. ಇತರರು ಇದನ್ನು ತಳ್ಳಿ ಹಾಕಿ ವೃಥಾ ಆಗ್ರಹಕ್ಕೆ ಒಳಗಾಗುವರು.

Advaita and Buddhism – A study by SSS

Here is a pdf on the above topic. Sri Satchidanandendra Sarswati Swamina (SSS) has studied the Mādhyamika Kārikā-s of Nagarjuna along with the commentary of Chandrakirti and also the Kārikā-s of Gaudapada and given an account of how Advaita and Buddhism differ.

I thank my friend Sri Pramod Bharadwaj for his effort in making this document in a convenient pdf format from a larger book of the author.

regards

ಶ್ರೀ ಸಚ್ಚಿದಾನಂದೇಂದ್ರ ಸರಸ್ವತಿಗಳು (ಹೊಳೆನರಸೀಪುರ) (1880 - 1975) ನಾಗಾರ್ಜುನನ ಮಾಧ್ಯಮಿಕ ಕಾರಿಕೆಗಳನ್ನು ಚಂದ್ರಕೀರ್ತಿಯ ವ್ಯಾಖ್ಯಾನದೊಂದಿಗೆ ಮತ್ತು ಗೌಡಪಾದ ಕಾರಿಕೆಗಳ ಅಧ್ಯಯನ ಮಾಡಿ ಅದ್ವೈತ ಹೇಗೆ ಬೌದ್ಧದಿಂದ ವಿಲಕ್ಷಣವಾದದ್ದು ಎಂಬುದನ್ನು ತಮ್ಮ ಈ ಲೇಖನದಲ್ಲಿ ತಿಳಿಸಿದ್ದಾರೆ:

ಇದನ್ನು ಇಲ್ಲಿ ಪಡೆಯಬಹುದು: https://adbhutam.files.wordpress.com/2021/01/advaita-and-buddhism-sss.pdf

ಇಲ್ಲಿ ಇಂಗ್ಲೀಷಿನಲ್ಲಿ ರಚಿತವಾದ 6 ಲೇಖನಗಳಿವೆ. ಇವು ಶ್ರೀ ಮಧ್ವಾಚಾರ್ಯರು ತಮ್ಮ 'ತತ್ತ್ವೋದ್ಯೋತ' ದಲ್ಲಿ ಉಲ್ಲೇಖಿಸಿರುವ 'ಬೌದ್ಧ ಕಾರಿಕೆಗಳ' ವಿಮರ್ಶೆ:

https://adbhutam.wordpress.com/2011/05/14/buddhism-advaita-and-dvaita-1/

https://adbhutam.wordpress.com/2011/06/10/buddhism-advaita-and-dvaita-2/

https://adbhutam.wordpress.com/2011/06/10/buddhism-advaita-and-dvaita-3/

https://adbhutam.wordpress.com/2011/07/11/buddhism-advaita-and-dvaita-4/

https://adbhutam.wordpress.com/2011/07/21/buddhism-advaita-and-dvaita-5/

https://adbhutam.wordpress.com/2011/08/30/buddhism-advaita-and-dvaita-6-concluded/

ಉಪಸಂಹಾರ:

'ಅದ್ವೈತವು ಪ್ರಚ್ಛನ್ನ ಬೌದ್ಧ' ಎಂಬ ಚಿರಕಾಲದ ಮಾತನ್ನು ಪ್ರಾಜ್ಞರು ಹೇಗೆ ಕಾಣಬೇಕು ಎಂಬುದು ಈ ಲೇಖನದಲ್ಲಿ ವಿಚಾರಿತವಾಗಿದೆ. ಆ ಪ್ರಾಚೀನ ಕಾಲದ ಮಾತು ಅದ್ವೈತವನ್ನು ಮಾತ್ರ ಟೀಕಿಸುತ್ತಿಲ್ಲ, ಅದರ ಹಿನ್ನೆಲೆಯಲ್ಲಿ 'ಬೌದ್ಧವು ಪ್ರಚ್ಛನ್ನ ಔಪನಿಷದ ಮತ' ಎಂಬ ಸಾಧಾರ ಟೀಕೆಯೂ ಇದೆ ಎಂಬುದು ತೋರಿಸಲಾಗಿದೆ. ಮತಗಳ ಮಧ್ಯೆ  ಕೆಲವು ಅಥವಾ ಅನೇಕ ಪ್ರಮೇಯಗಳ ಸಾಮ್ಯತೆ (ಸಾಂಕರ್ಯ) ಇರುವುದು ಸಹಜ; ಇದನ್ನು ಸಂಪೂರ್ಣವಾಗಿ ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕಾದ ಅವಶ್ಯಕತೆ ಇದೆ. ಇದನ್ನು ನಿರ್ಲಕ್ಷಿಸಿದರೆ ಪ್ರಾಜ್ಞರು ಒಪ್ಪದ ಅಭಿಪ್ರಾಯವನ್ನು ನಾವು ತಾಳುತ್ತೇವೆ ಎಂದಾಗುತ್ತೆ. ಪೂರ್ವಾಗ್ರಹಕ್ಕೆ ಎಡೆ ಕೊಡದೆ ಇರಬೇಕು ಎಂಬುದೂ ಸಿದ್ಧವಾಗುತ್ತೆ.

ಓಂ ತತ್ ಸತ್